# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜನವರಿ 24, 2022

ಸಂಪುಟ : 48 ಸಂಚಿಕೆ : 254 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




## ನೇತಾಜಿ ಅವರ ಹೋಲೋಗ್ರಾಮ್ ಪ್ರತಿಮೆ ಉದ್ಘಾಟನೆ

ನವದೆಹಲಿ, ಜ. 23 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ ದೆಹಲಿಯ ಇಂಡಿಯಾ ಗೇಟ್‌ನಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಹೋಲೋಗ್ರಾಮ್ ಪ್ರತಿಮೆಯನ್ನು ಅನಾವರಣಗೊಳಿಸಿದ್ದಾರೆ. ಗ್ರಾನೈಟ್‌ನಲ್ಲಿ ರೂಪಿಸಲಾಗುತ್ತಿರುವ ನೇತಾಜಿ ಪ್ರತಿಮೆ ರೂಪುಗೊಂಡ ನಂತರ ಹೊಲೊಗ್ರಾಮ್ ಪ್ರತಿಮೆ ತೆರವುಗೊಳಿಸಲಾಗುವುದು. ಈ ಸಂದರ್ಭದಲ್ಲಿ ಮಾತನಾಡಿರುವ ಪ್ರಧಾನಿ ಮೋದಿ, ದೇಶದ ಮಹಾನ್ ವ್ಯಕ್ತಿಗಳು ನೀಡಿರುವ ಕೊಡುಗೆಗಳನ್ನು ಅಳಿಸಲು ಸ್ವಾತಂತ್ರ್ಯಾನಂತರ ಪ್ರಯತ್ನ ನಡೆಸಲಾಗಿತ್ತು. ಲಕ್ಷಾಂತರ ಜನರ ತ್ಯಾಗದಿಂದ ದೊರೆತ ಸ್ವಾತಂತ್ರ್ಯವನ್ನು ಸೀಮಿತಗೊಳಿಸಲು ಯತ್ನಿಸ ಲಾಗಿತ್ತು. ಈಗ ಆ ತಪ್ಪುಗಳನ್ನು ಸರಿಪಡಿಸಲಾಗುತ್ತಿದೆ ಎಂದಿದ್ದಾರೆ.

# ಜಿಲ್ಲೆಗೊಂದು ಪೀಠವಾದರೂ ಅಭ್ಯಂತರವಿಲ್ಲ

## ಮತಾಂತರ ತಡೆ, ಸಂಸ್ಕಾರಕ್ಕಾಗಿ ಮೂರನೇ ಪಂಚಮಸಾಲಿ ಪೀಠ: ವಚನಾನಂದ ಶ್ರೀ

ಹರಿಹರ, ಜ.23 - ಪಂಚಮಸಾಲಿ ಸಮುದಾಯದ ಭಕ್ತರು ಮತಾಂತರ ಆಗುತ್ತಿರುವುದನ್ನು ತಡೆಯಲು ಮತ್ತು ಜಮಖಂಡಿ ಭಾಗದಲ್ಲಿ ಪಂಚಮಸಾಲಿ ಸಮಾಜದ ಭಕ್ತರಿಗೆ ಧಾರ್ಮಿಕ, ಸಾಮಾಜಿಕ, ಅಧ್ಯಾತ್ಮಿಕ ಸಂಸ್ಕಾರ ಕೊಡಲು ಪಂಚಮಸಾಲಿ ಸಮಾಜದ ಮೂರನೇ ಪೀಠ ಸ್ಥಾಪನೆಗೆ ನಾವು ಸಂಪೂರ್ಣ ಸಹಕಾರ ಕೊಡುವುದಾಗಿ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಜಗದ್ಗುರು ಶ್ರೀ ವಚನಾನಂದ ಶ್ರೀಗಳು ಹೇಳಿದರು.

ನಗರದ ಪಂಚಮಸಾಲಿ ಪೀಠದ ಆವರಣದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಪಂಚಮಸಾಲಿ ಸಮುದಾಯದ ಅನೇಕ ಭಕ್ತರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಆಗುತ್ತಿದ್ದಾರೆ. ಅದನ್ನು ತಡೆಯಲು ಫೆ.14ರಂದು ಮೂರನೇ ಪಂಚಮಸಾಲಿ ಪೀಠದ ಸ್ಥಾಪಿಸಲಾಗುತ್ತಿದೆ ಎಂದು ಮೊನ್ನೆ ನಡೆದ ಸಾಂಕೇತಿಕ ಹರ ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ ಸಂದರ್ಭದಲ್ಲಿ ಶ್ರೀ ಬಬಲೇಶ್ವರ ಪೀಠದ ಶ್ರೀ ಮಹದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಮನಗೂಳಿ ಶ್ರೀ ಅಭಿನವ ಸಂಗನಬಸವ ಮಹಾಸ್ವಾಮಿಗಳು ತಿಳಿಸಿದ್ದಾರೆ ಎಂದರು.

ನಮಗೆ ಹರಿಹರ ಪಂಚಮಸಾಲಿ ಪೀಠ ಮೂಲ ಪೀಠ ಎಂದವರು ಸ್ಪಷ್ಟವಾಗಿ ಹೇಳಿದ್ದಾರೆ. ನಾವು ನೀವು ಬೇರೆ ಅಲ್ಲ, ಎಲ್ಲರೂ ಸೇರಿ ಸಮಾಜ ಸಂಘಟನೆ ಮಾಡಿ ಸಮಾಜಕ್ಕೆ ಸಂಸ್ಕಾರ ಕೊಡೋಣ. ಅದಕ್ಕೆ ನಿಮ್ಮ ಸಹಕಾರ ಬೇಕು ಎಂದು ಕೇಳಿದಾಗ ನಮ್ಮ ಕಡೆಯಿಂದ ಸಂಪೂರ್ಣ ಸಹಕಾರ ಕೊಡುವುದಾಗಿ



ಹೇಳಿದ್ದೇವೆ. ಅಂದು ನಡೆಯುವ ಸಮಾರಂಭಕ್ಕೆ ನಾನು ಮತ್ತು ಇಲ್ಲಿನ ಅನೇಕ ಗಣ್ಯರು ತೆರಳಿ ಯಶಸ್ವೀ ಮಾಡುವುದಾಗಿ ಹೇಳಿದರು.

ಪ್ರತಿ ಜಿಲ್ಲೆಗೊಂದು ಪೀಠ ಆಗಲೂ ಅಭ್ಯಂತರವಿಲ್ಲ. ಪೀಠಗಳು ಹೆಚ್ಚಾದರೆ ಮಠಕ್ಕೆ ಬರುವ ಭಕ್ತರ ಸಂಖ್ಯೆ ಕಡಿಮೆ ಆಗುತ್ತದೆ ಎಂಬ ಭೀತಿ ನಮಗಿಲ್ಲ. ರಾಜ್ಯದಲ್ಲಿ ಸುಮಾರು 2000 ಮಠಗಳಿವೆ. ಮಠಗಳಿಗೆ ಹೆಚ್ಚು ದಾನ ನೀಡಿರುವುದು ಪಂಚಮಸಾಲಿ ಭಕ್ತರು ಎಂದವರು ಹೇಳಿದರು.

ಸಚಿವ ಮುರುಗೇಶ್ ನಿರಾಣಿ ನಾವು ಪೀಠಕ್ಕೆ ಬರುವುದಕ್ಕಿಂತ ಮುಂಚಿತವಾಗಿ ಪೀಠದ ಭಕ್ತರಾಗಿದ್ದರು. ಅವರ ಕೊಡುಗೆ ಪೀಠಕ್ಕೆ ಅಪಾರ. ಅವರ ಅದೃಷ್ಟದಲ್ಲಿ ಇದ್ದರೆ ಮುಖ್ಯಮಂತ್ರಿ ಆಗುತ್ತಾರೆ. ಅವರು ಪಂಚಮಸಾಲಿ ಸಮುದಾಯದ 75 ಸಾವಿರ ಯುವಕರಿಗೆ ಉದ್ಯೋಗ ನೀಡಿದ್ದಾರೆ. ಅವರು ಮುಖ್ಯಮಂತ್ರಿಯಾದರೆ ನಮ್ಮ ಸಮುದಾಯದ ಹೆಮ್ಮೆ ಎಂದರು.

ನಮ್ಮೊಬ್ಬರಿಂದ ಇಡೀ ರಾಜ್ಯದಲ್ಲಿ ಸಮುದಾಯದ ಸಂಘಟನೆ ಸಾಧ್ಯವಿಲ್ಲ. ಅನೇಕ ಭಕ್ತರ ಮನೆಗಳಿಗೆ ಗೃಹ ಪ್ರವೇಶ, ಮದುವೆ ಇತರೆ ಸಮಾರಂಭಗಳಲ್ಲಿ ಪಾಲ್ಗೊಳ್ಳಲು ಸಮಯ ಸಾಕಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಆಯಾ ಭಾಗದಲ್ಲಿ ನಮ್ಮ ಸಮುದಾಯದ ಸ್ವಾಮಿಗಳು ಇದ್ದರೆ ಅವರು ಪಾಲ್ಗೊಂಡು ಸಂಸ್ಕಾರ ಕೊಡುವ ಮೂಲಕ ಸಮಾಜ ಕಟ್ಟುವ ಸಂದೇಶ ನೀಡುತ್ತಾರೆ. ಈ ನಿಟ್ಟಿನಲ್ಲಿ ಹೆಜ್ಜೆ ಹಾಕುತ್ತಿದ್ದೇವೆ. 2ಎ ಮೀಸಲಾತಿ ಹೋರಾಟ, ಪೀಠದ ಸ್ವಾಮಿಗಳಾದ ನಮ್ಮ ಕರ್ತವ್ಯ. ಸಮಾಜದ ಭಕ್ತರಿಗೆ ಶಿಕ್ಷಣ, ಉದ್ಯೋಗ ಕೊಡಿಸುವ ಕೆಲಸವನ್ನು ಸ್ವಾಮಿಗಳಾದವರು ಮಾಡಬೇಕು. ಅದು ಅವರ ಕರ್ತವ್ಯ.

– ಶ್ರೀ ವಚನಾನಂದ ಸ್ವಾಮೀಜಿ

2ಎ ಮೀಸಲಾತಿಗೆ 1994 ರಿಂದ ರಾಜ್ಯ ಸಂಘ ಹೋರಾಟ ಮಾಡುತ್ತಾ ಬಂದಿದೆ. ಇತ್ತೀಚಿಗೆ ಕೇಂದ್ರ ಹಿಂದುಳಿದ ಆಯೋಗವನ್ನು ಭೇಟಿ ಮಾಡಿ ಮತ್ತು ಮೀಸಲಾತಿ ನ್ಯಾಯ ಮಂಡಳಿ ಜೊತೆಗೆ ಚರ್ಚೆ ಮಾಡಿ 1871 ರಿಂದ (2ನೇ ಪುಟಕ್ಕೆ)

## ವಿಧಾನಸೌಧದ ಎದುರಿಗೆ ನೇತಾಜಿ ಪ್ರತಿಮೆ ಸ್ಥಳಾಂತರ

ಬೆಂಗಳೂರು, ಜ. 23 – ವಿಧಾನಸೌಧದ ಆವರಣದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯನ್ನು ಮುಂಭಾಗಕ್ಕೆ ಸ್ಥಳಾಂತರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಪ್ರಸಕ್ತ ನೇತಾಜಿ ಅವರ ಪ್ರತಿಮೆ ವಿಧಾನಸೌಧದ ಪಶ್ಚಿಮ ಗೇಟ್ ಬಳಿ ಇದೆ. ಇದನ್ನು ಸೂಕ್ತ ಸ್ಥಳಕ್ಕೆ ತರುವ ಮೂಲಕ ಅರ್ಹ ಗೌರವ ಸಲ್ಲಿಸಲಾಗುವುದು ಎಂದವರು ತಿಳಿಸಿದ್ದಾರೆ. ನೇತಾಜಿ ಅವರ 125ನೇ ಜನ್ಮ ದಿನಾಚರಣೆ ಸಂದರ್ಭದಲ್ಲಿ ಅವರ ಕೊಡುಗೆಯನ್ನು ಪ್ರಶಂಸಿಸಿರುವ ಮುಖ್ಯಮಂತ್ರಿ, ಮುಂದಿನ ವರ್ಷ ವಿಧಾನಸೌಧದ ಮುಂಭಾಗದಲ್ಲಿ ನೇತಾಜಿ ಜನ್ಮ ದಿನ ಆಚರಿಸಲಾಗುವುದು ಎಂದಿದ್ದಾರೆ.

## ಕೊರೊನಾ ಹರಡುವಿಕೆ ವೇಗ ಕುಸಿತ

ನವದೆಹಲಿ, ಜ. 23 – ಕೊರೊನಾ ವೈರಸ್ ಹರಡುವಿಕೆಯ ವೇಗವನ್ನು ಸೂಚಿರುವ ಆರ್ - ಮೌಲ್ಯ ಕಳೆದ ಜನವರಿ 14-21ರ ಅವಧಿಯಲ್ಲಿ 1.57ಕ್ಕೆ ಕುಸಿದಿದೆ. ಮುಂದಿನ ಎರಡು ವಾರಗಳಲ್ಲಿ ಕೊರೊನಾ ಅತಿ ಹೆಚ್ಚಿನ ಮಟ್ಟ ತಲುಪಲಿದೆ ಎಂದು ಐ.ಐ.ಟಿ. ಮದ್ರಾಸ್ ನಡೆಸಿರುವ ಪ್ರಾಥಮಿಕ ಅಧ್ಯಯನ ತಿಳಿಸಿದೆ.

ಸೋಂಕಿತ ವ್ಯಕ್ತಿಯೋರ್ವ ಇತರರಿಗೆ ಸೋಂಕು ಹರಡುವ ವೇಗವನ್ನು ಆರ್ - ಮೌಲ್ಯ ಎಂದು ಗುರುತಿಸ ಲಾಗುತ್ತದೆ. ಆರ್ ಮೌಲ್ಯ 1ಕ್ಕಿಂತ ಕಡಿಮೆಯಾದಾಗ ಸೋಂಕು ಪ್ರಕರಣಗಳು ಕಡಿಮೆಯಾಗುತ್ತವೆ.

ಜನವರಿ 14ರಿಂದ ಜನವರಿ 21ರ ನಡುವೆ ಆರ್ ಮೌಲ್ಯ 1.57ರಷ್ಟಾಗಿದೆ. ಜನವರಿ 7-13ರ ಅವಧಿಯಲ್ಲಿ ಆರ್ ಮೌಲ್ಯ 2.2 ಇಗಿತ್ತು. ಜನವರಿ 1-6ರ ನಡುವೆ 4 ಹಾಗೂ ಡಿಸೆಂಬರ್ 25-31ರ ನಡುವೆ 2.9 ಆಗಿತ್ತು. ಮುಂಬೈನಲ್ಲಿ ಆರ್ ಮೌಲ್ಯ 0.67, ದೆಹಲಿಯಲ್ಲಿ 0.98, ಚೆನ್ನೈನಲ್ಲಿ 1.2 ಹಾಗೂ ಕೊಲ್ಕೊತಾದಲ್ಲಿ 0.56 ಆಗಿದೆ.

# ರೈಲ್ವೇ ಹಳಿ ಮೇಲೆ ಫೋಟೋ ಶೂಟ್ ರೈಲು ಡಿಕ್ಕಿ : ಸ್ಥಳದಲ್ಲೇ ಬಾಲಕ ಸಾವು

ದಾವಣಗೆರೆ, ಜ.23- ರೈಲ್ವೇ ಹಳಿ ಮೇಲೆ ಫೋಟೋ ಶೂಟ್ ಗೆ ನಿಂತ ಬಾಲಕನೋರ್ವ ರೈಲು ಡಿಕ್ಕಿಯಾಗಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿನ ಡಿಸಿಎಂ ಟೌನ್ ಶಿಪ್ ಬಳಿ ಇಂದು ಸಂಜೆ ನಡೆದಿದೆ.

ನಗರದ ಭಗತ್ ಸಿಂಗ್ ನಗರದ 3 ಮೇನ್, 12 ನೇ ಕ್ರಾಸ್ ನ ಡೇವಿಡ್ ಅವರ ಮಗ ಸಚಿನ್ ಡೇವಿಡ್ (15) ಮೃತಪಟ್ಟ ಬಾಲಕ. ಇಂದು ಭಾನುವಾರವಾದ್ದರಿಂದ ಸಂಜೆ ಸ್ನೇಹಿತರ ಜೊತೆಗೂಡಿ ಫೋಟೋ ಶೂಟ್ ಗೆ ಡಿಸಿಎಂ ಟೌನ್ ಶಿಪ್ ಬಳಿಯ ರೈಲ್ವೆ ಹಳಿಯತ್ತ ಹೋಗಿದ್ದರು.

ಬೇರೆ ಹಳಿ ಮೇಲೆ ರೈಲು ಹೋಗಲಿದ್ದು, ಆ ಸಮಯದಲ್ಲಿ ಹಿಂದೆ ಒಳ್ಳೆಯ ಬ್ಯಾಕ್‌ಗ್ರೌಂಡ್ ಸಿಗುತ್ತದೆ ಎಂದು ಬಾಲಕ ರೈಲ್ವೇ ಹಳಿ ಮೇಲೆ ಪೋಸ್ ನೀಡುತ್ತಾ ನಿಂತಿದ್ದ. ಈ ಸಂದರ್ಭದಲ್ಲಿ ಬಾಲಕ ನಿಂತಿದ್ದ ಹಳಿ ಮಾರ್ಗದಲ್ಲಿ ಬೆಂಗಳೂರಿನಿಂದ ದಾವಣಗೆರೆಗೆ ಬರುತ್ತಿದ್ದ ರೈಲು ಡಿಕ್ಕಿ ಹೊಡೆದಿದೆ ಎಂದು ಹೇಳಲಾಗಿದೆ.

ಸೆಲ್ಫಿ ತೆಗೆಯುವ ಗುಂಗಿನಲ್ಲಿದ್ದ ಈ ಬಾಲಕನಿಗೆ ಇದ್ದ ಎರಡು ಜೋಡಿ ಹಳಿಯಲ್ಲಿ ರೈಲು ಯಾವ ಹಳಿ ಮೇಲೆ ಬರುತ್ತಿದೆ ಎಂದು ಗಮನಿಸದಿರುವುದೇ ಈ ಅನಾಹುತಕ್ಕೆ ಕಾರಣ ಎನ್ನಲಾಗಿದೆ.

ಸ್ಥಳಕ್ಕೆ ರೈಲ್ವೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪಾದಯಾತ್ರೆ ತಡೆಗೆ ಹೂಡಿದ ತಂತ್ರವೇ ವೀಕೆಂಡ್ ಕರ್ಫ್ಯೂ

ಹರಪನಹಳ್ಳಿ, ಜ.23- ತಮಿಳುನಾಡಿನಲ್ಲಿ ಬಿಜೆಪಿ ಬೆಳೆಯಲು ರಾಜ್ಯದ ಹಿತ ಕಡೆಗಣಿಸಿದ ಬಿಜೆಪಿ, ಮೇಕೆದಾಟು ಪಾದಯಾತ್ರೆ ನಿಲ್ಲಿಸಲು ಹೂಡಿದ ತಂತ್ರವೇ ವೀಕೆಂಡ್ ಕರ್ಫ್ಯೂ ಎಂದು ಕೆ.ಪಿ.ಸಿ.ಸಿ. ಮಾಧ್ಯಮ ವಿಶ್ಲೇಷಕರಾದ ಶ್ರೀಮತಿ ಎಂ.ಪಿ.ವೀಣಾ ಮಾಹಂತೇಶ್ ಹೇಳಿದರು.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿ, ಕರ್ನಾಟಕದ ಇತಿಹಾಸದಲ್ಲಿ ಐತಿಹಾಸಿಕ ದಾಖಲೆ ಸೃಷ್ಟಿಸಿದ ಮೇಕೆದಾಟು ಪಾದಯಾತ್ರೆ ಅಕ್ಷರಷಃ ಬಿಜೆಪಿಯ ಬುಡವನ್ನು ನಲುಗಿಸಿದೆ ಎಂದರು.

'ನಮ್ಮ ನೀರು ನಮ್ಮ ಹಕ್ಕು' ಎಂಬ ಧ್ಯೇಯದೊಂದಿಗೆ ಕಾಂಗ್ರೆಸ್ ಪಕ್ಷದ ನೇತೃತ್ವದ ಮೇಕೆದಾಟು ಪಾದಯಾತ್ರೆಗೆ ರಾಜ್ಯದಾದ್ಯಂತ ಸಹಸ್ರಾರು ಜನ ಬಂದಿದ್ದರು.

ಕೆ.ಪಿ.ಸಿ.ಸಿ. ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಜರುಗಿದ ಈ ಪಾದಯಾತ್ರೆಯು ಅಭೂತಪೂರ್ವ (2ನೇ ಪುಟಕ್ಕೆ)

## ಸೋಂಕಿದ್ದರೂ ನೆಗೆಟಿವ್ ಬರುವ ಬಿಎ.2 ರೂಪಾಂತರಿ ವ್ಯಾಪಕ

ನವದೆಹಲಿ, ಜ. 23 – ದೇಶದಲ್ಲಿ ಒಮಿಕ್ರಾನ್ ರೂಪಾಂತರಿ ಸಮುದಾಯ ಹರಡುವಿಕೆ ಹಂತದಲ್ಲಿದೆ. ಹಲವು ನಗರಗಳಲ್ಲಿ ಒಮಿಕ್ರಾನ್ ರೂಪಾಂತರಿ ಅತಿ ವೇಗ ವಾಗಿ ಹರಡುತ್ತಿದೆ ಎಂದು ಐ.ಎನ್.ಎಸ್.ಎ.ಸಿ.ಒ. ಜಿ.ಯ ಇತ್ತೀಚಿನ ವರದಿಯಲ್ಲಿ ತಿಳಿಸಲಾಗಿದೆ.



ಒಮಿಕ್ರಾನ್‌ನ ಉಪ ಪ್ರಭೇದವಾದ ಬಿಎ.2 ದೇಶದಲ್ಲಿ ಅತಿ ಹೆಚ್ಚಾಗಿ ಕಂಡು ಬಂದಿದೆ ಎಂದೂ ವರದಿಯಲ್ಲಿ ಹೇಳಲಾಗಿದೆ. ಒಮಿಕ್ರಾನ್‌ನ ಉಪ ಪ್ರಭೇಧವಾದ ಬಿಎ.2 ಭಾರತದಲ್ಲಿ ಅತಿ ಹೆಚ್ಚಾಗಿದೆ. ಈ ರೂಪಾಂತರಿಯಲ್ಲಿ ಎಸ್ ಜೀನ್ ಇರುವುದಿಲ್ಲ.

ಹೀಗಾಗಿ ಎಸ್ ಜೀನ್ ಆಧರಿತ ಪರೀಕ್ಷೆಗಳನ್ನು ನಡೆಸಿದಾಗ ಸೋಂಕಿದ್ದರೂ ಬಹಳಷ್ಟು ಸಂದರ್ಭಗಳಲ್ಲಿ ನೆಗೆಟಿವ್ ಬರುತ್ತದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಬಹುತೇಕ ಒಮಿಕ್ರಾನ್ ಪ್ರಕರಣಗಳು ಲಕ್ಷಣರಹಿತ ಇಲ್ಲವೇ ಸೌಮ್ಯ ಲಕ್ಷಣಗಳಿಂದ ಕೂಡಿವೆ. ಎಂದು ವರದಿಯಲ್ಲಿ ತಿಳಿಸಲಾಗಿದೆ.

# ನೆಲೆಗಾಗಿ ಪರದಾಡುತ್ತಿರುವ ನೇತಾಜಿ ಸ್ಥಾಪಿಸಿದ ಪಕ್ಷ

## ಫಾರ್ವರ್ಡ್ ಬ್ಲಾಕ್‌ನಲ್ಲೀಗ ಸಂಸದ, ಶಾಸಕನೂ ಇಲ್ಲ

ಕೊಲ್ಕೊತಾ,ಜ. 23 – ನೇತಾಜಿ ಸುಭಾಷ್ ಚಂದ್ರ ಬೋಸ್ ಅವರಿಂದ ಸ್ಥಾಪಿಸಲ್ಪಟ್ಟಿದ್ದ ಫಾರ್ವರ್ಡ್ ಬ್ಲಾಕ್ ಪಕ್ಷ, ಈಗ ಅಸ್ತಿತ್ವಕ್ಕಾಗಿ ಹೆಣಗಾಡುತ್ತಿದೆ. ಬೋಸ್ ಅವರ 125ನೇ ಜನ್ಮ ದಿನದ ಸಂದರ್ಭದಲ್ಲಿ ಪಕ್ಷದ ಸ್ಥಿತಿಗತಿ ನೋಡಿದಾಗ, ಹಣಕಾಸು ಬಿಕ್ಕಟ್ಟು, ಹಲವು ಒಡಕು ಹಾಗೂ ನಾಯಕತ್ವದ ಕೊರತೆ ಕಾಣುತ್ತಿದೆ.

ನೇತಾಜಿ ಜನರ ಮೇಲೆ ಹೊಂದಿದ್ದ ಪ್ರಭಾವದ ಕಾರಣದಿಂದಾಗಿ, 1939ರಲ್ಲಿ ಕಾಂಗ್ರೆಸ್ ಪಕ್ಷದ ಬಂಡಾಯ ಬಣವಾಗಿ ಫಾರ್ವರ್ಡ್ ಬ್ಲಾಕ್ ರೂಪುಗೊಂಡಿತ್ತು. ಸ್ವಾತಂತ್ರ್ಯಾನಂತರ ತಮಿಳುನಾಡು, ಆಂಧ್ರ ಪ್ರದೇಶ, ಕೇರಳ ಹಾಗೂ ಅಸ್ಸಾಂಗಳಲ್ಲಿ ಫಾರ್ವರ್ಡ್ ಬ್ಲಾಕ್ ಅಸ್ತಿತ್ವ ತೋರಿಸಿಕೊಂಡಿತ್ತು. ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಅದರ ಹಿಡಿತ ಹೆಚ್ಚಾಗಿತ್ತು. ಆದರೆ, ಎಂಟು ದಶಕಗಳ ನಂತರ ದೇಶದ ಕೆಲವೇ ಭಾಗಗಳಲ್ಲಿ ಪಕ್ಷ ಉಳಿದುಕೊಂಡಿದೆ. ಈಗ ಪಕ್ಷದಲ್ಲಿ ಯಾವುದೇ ಸಂಸದ, ಇಲ್ಲವೇ ಶಾಸಕ ಉಳಿದಿಲ್ಲ.

ಪುನಶ್ಚೇತನಕ್ಕಾಗಿ ಈಗಿರುವ ನಾಯಕತ್ವ ಪ್ರಯತ್ನ ನಡೆಸುತ್ತಿದೆಯಾದರೂ, ಸಂಪನ್ಮೂಲದ ಕೊರತೆ ಇದೆ. ಸುದೀರ್ಘ ಕಾಲ ಸಿಪಿಐ (ಎಂ) ನೆರಳಲ್ಲೇ ಇದ್ದ ಫಾರ್ವರ್ಡ್ ಬ್ಲಾಕ್, ಸ್ವಂತ ಅಸ್ತಿತ್ವ ಕಂಡುಕೊಳ್ಳದೇ ಇದ್ದದ್ದು ಅತಿ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

ನಾವು ದೊಡ್ಡ ಬಿಕ್ಕಟ್ಟು ಎದುರಿಸುತ್ತಿರುವುದು ನಿಜ. ಸ್ವಾತಂತ್ರ್ಯಾನಂತರ ಮಹಾರಾಷ್ಟ್ರ, ಬಿಹಾರ, ದಕ್ಷಿಣದ ರಾಜ್ಯಗಳು ಹಾಗೂ ಪಶ್ಚಿಮ ಬಂಗಾಳಗಳಲ್ಲಿ ನಮ್ಮ ಶಾಸಕರಿದ್ದರು. ಈಗ ಒಬ್ಬ ಸಂಸದ – ಶಾಸಕನೂ ಇಲ್ಲ. ಸದಸ್ಯತ್ವ ಸಹ ಸತತವಾಗಿ ಇಳಿಯುತ್ತಿದೆ. ಮತ್ತೆ ಬಲವಾಗುವ ಕುರಿತು ಚರ್ಚಿಸುತ್ತಿದ್ದೇವೆ ಎಂದು ಎ.ಐ.ಎಫ್.ಬಿ. ಪ್ರಧಾನ ಕಾರ್ಯದರ್ಶಿ ದೇವವ್ರತ ಬಿಸ್ವಾಸ್ ಹೇಳಿದ್ದಾರೆ. ನೇತಾಜಿ ಅವರಲ್ಲದೇ ಹೆಚ್.ವಿ. ಕಾಮತ್, (2ನೇ ಪುಟಕ್ಕೆ)






## ದೇಶೀಯ ಹಾಡುಗಳಿಗಾಗಿ 'ಅಬೈಡ್ ವಿತ್ ಮಿ'ಗೆ ಕೊಕ್

ನವದೆಹಲಿ, ಜ. 23 – ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೇಶೀಯ ಹಾಡುಗಳಿಗೆ ಒತ್ತು ನೀಡಬೇಕೆಂದು 'ಅಬೈಡ್ ವಿತ್ ಮಿ' ಹಾಡನ್ನು ಬೀಟಿಂಗ್ ರಿಟ್ರೀಟ್ ಸಮಾರಂಭದಿಂದ ಕೈ ಬಿಡಲಾಗಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

'ಅಬೈಡ್ ವಿತ್ ಮಿ' ಕ್ರಿಶ್ಚಿಯನ್ ಹಾಡನ್ನು ಸ್ಕಾಟಿಶ್ ಆಂಗ್ಲಿಕನ್ ಕವಿ ಹೆನ್ರಿ ಫ್ರಾನ್ಸಿಸ್ ಲೈಟೆ ಅವರು 1847ರಲ್ಲಿ ರಚಿಸಿದ್ದರು. ಇದು 1950ರಿಂದ ಬೀಟಿಂಗ್ ರಿಟ್ರೀಟ್ ಸಮಾರಂಭದ ಭಾಗ ವಾಗಿದೆ. ಆದರೆ, ಶನಿವಾರ ಪ್ರಕಟಿಸಲಾದ ಹಾಡುಗಳ ಪಟ್ಟಿಯಲ್ಲಿ ಅಬೈಡ್ ವಿತ್ ಮಿ ಇಲ್ಲ.

**2020ರಲ್ಲೂ ಕೇಂದ್ರ ಸರ್ಕಾರ ಅಬೈಡ್ ವಿತ್ ಮಿ ಕೈ ಬಿಡಲು ಯೋಜಿಸಿತ್ತು. ತೀವ್ರ ವಿರೋಧದ ನಂತರ ಆ ಪ್ರಯತ್ನ ಬಿಡಲಾಗಿತ್ತು.**

ಈ ಬಾರಿ ಗರಿಷ್ಠ ಹಾಡುಗಳು ದೇಶೀಯವಾಗಿರಬೇಕು ಎಂದು ಕೇಂದ್ರ ಸರ್ಕಾರ ಉದ್ದೇಶಿಸಿದೆ. ಹೀಗಾಗಿ ಭಾರತೀಯ ಮೂಲದ ಹಾಡುಗಳನ್ನೇ ಜನವರಿ 29ರ ಸಮಾರಂಭದಲ್ಲಿ ನುಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ಈ ಬಾರಿ ಅಬೈಡ್ ವಿತ್ ಮಿ ಜಾಗಕ್ಕೆ 'ಯೇ ಮೇರೆ ವತನ್ ಕೆ ಲೋಗ್' ಹಾಡು ತರಲಾಗಿದೆ. 1962ರ ಭಾರತ – ಚೀನ ಸಮರದಲ್ಲಿ ಭಾರತೀಯ ಸೈನಿಕರ ತ್ಯಾಗವನ್ನು ಬಿಂಬಿಸುವ ಈ ಹಾಡನ್ನು ಕವಿ ಪ್ರದೀಪ್ ಅವರು ರಚಿಸಿದ್ದಾರೆ. 'ಯೇ ಮೇರೆ ವತನ್ ಕೆ ಲೋಗೋ' ಹಾಡು ಭಾರತದ ಜನರಲ್ಲಿ ಅತಿ ಹೆಚ್ಚು ಮಾನ್ಯತೆ ಪಡೆದಿದೆ. ಅಬೈಡ್ ವಿತ್ ಮಿಗೆ ಹೋಲಿಸಿದರೆ, ಭಾರತೀಯ ಸೈನಿಕರ ಶೌರ್ಯವನ್ನು ಯೇ ಮೇರೆ ವತನ್ ಕೆ ಲೋಗೋ ಉತ್ತಮವಾಗಿ ಬಿಂಬಿಸುತ್ತದೆ ಎಂದು ಮೂಲಗಳು ಹೇಳಿವೆ.


ಪ್ರಥಮ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ವೇದಾ ಮಂಜುನಾಥ್



ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ನಿಮಗೆ ಪರಮಾತ್ಮನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ, ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು :
ಆರ್.ಎಸ್. ಚನ್ನಬಸಪ್ಪ ಮತ್ತು ಕುಟುಂಬದವರು, ತರಳಬಾಳು ಬಡಾವಣೆ, ದಾವಣಗೆರೆ.

# ಫುಟ್‌ಪಾತ್ ವ್ಯಾಪಾರಿಗಳಿಂದ ಹೆಚ್ಚು ಹಣ ವಸೂಲಿ



ಹರಿಹರದಲ್ಲಿ ಜಯಕರ್ನಾಟಕ ಸಂಘಟನೆ ಪ್ರತಿಭಟನೆ

ಹರಿಹರ, ಜ. 23- ಫುಟ್‌ಪಾತ್ ವ್ಯಾಪಾರಿಗಳಿಂದ ನಗರಸಭೆ ನಿಗದಿ ಪಡಿಸಿರುವುದಕ್ಕಿಂತ ಹೆಚ್ಚು ಹಣ ವಸೂಲಿ ಮಾಡಲಾಗುತ್ತಿದೆ ಎಂದು ಆರೋಪಿಸಿ ನಗರದ ಜಯಕರ್ನಾಟಕ ಸಂಘಟನೆ ಪ್ರತಿಭಟನೆ ನಡೆಸಿದೆ.

ಗುತ್ತಿಗೆದಾರರಿಂದ ಹೆಚ್ಚಿನ ಹಣ ವಸೂಲಿ ನಿಯಂತ್ರಿಸುವಂತೆ ನಗರಸಭೆಯ ಪೌರಾಯುಕ್ತರಾದ ಎಸ್. ಲಕ್ಷ್ಮಿ ಮತ್ತು ಕಂದಾಯ ಅಧಿಕಾರಿಯಾದ ಮಂಜುನಾಥ್ ಅವರಿಗೆ ಸಂಘಟನೆ ಪ್ರತಿಭಟನೆ ನಡೆಸಿದ ನಂತರ ಮನವಿ ಸಲ್ಲಿಸಿದೆ.

ಈ ವೇಳೆ ಮಾತನಾಡಿದ ಜಯಕರ್ನಾಟಕ ಸಂಘಟನೆಯ ಮುಖಂಡರು, ಫುಟ್‌ಪಾತ್ ವ್ಯಾಪಾರಿಗಳಿಂದ, ದಿನವಹಿ ಸಂತೆ ಮತ್ತು ಪ್ರತಿ ಮಂಗಳವಾರ ನಡೆಯುವ ವಾರದ ಸಂತೆಯಲ್ಲಿ ನಗರಸಭೆ ವತಿಯಿಂದ ನಿಗದಿಪಡಿಸಿದ ದರಗಳನ್ನು ಪಡೆಯದೇ ಅತಿ ಹೆಚ್ಚು ದರವನ್ನು ಸಣ್ಣ-ಪುಟ್ಟ ವ್ಯಾಪಾರಿಗಳಿಂದ ವಸೂಲಿ ಮಾಡಲಾಗುತ್ತಿದೆ. ಅಳತೆಗನುಗುಣವಾಗಿ ನಿಗದಿಪಡಿಸಿದ ದರಗಳನ್ನು ವಸೂಲಿ ಮಾಡಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಹೆಚ್ಚುವರಿಯಾಗಿ ಪಡೆದಿರುವ ಹಣ ವಾಪಸ್ ಕೊಡಿಸಬೇಕು. ಹಣ ಸ್ವೀಕರಿಸಿದ ಬಗ್ಗೆ ರಸೀದಿ ನೀಡಲು ಮತ್ತು ನಿಗದಿಪಡಿಸಿದ ದರವನ್ನು ಬಹಿರಂಗವಾಗಿ ಧ್ವನಿವರ್ಧಕದ ಮೂಲಕ ಮತ್ತು ಕರಪತ್ರದ ಮೂಲಕ ತಿಳಿಸಿ ಅರಿವು ಮೂಡಿಸಲು ಕ್ರಮ ತೆಗೆದುಕೊಳ್ಳಬೇಕು. ಈಗ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸಬೇಕು ಎಂದು ನಾಯಕರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಯಕರ್ನಾಟಕ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಗೋವಿಂದ್, ಪ್ರಧಾನ ಕಾರ್ಯದರ್ಶಿ ಸುನಿಲ್, ಸಂಘಟನಾ ಕಾರ್ಯದರ್ಶಿ ಮಧು, ನಗರ ವಿದ್ಯಾರ್ಥಿ ಘಟಕದ ಅಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷ ಪ್ರವೀಣ್, ಪ್ರಧಾನ ಕಾರ್ಯದರ್ಶಿ ರಜತ್, ಸಂಘಟನಾ ಕಾರ್ಯದರ್ಶಿ ಪಾಂಡುರಂಗ, ಖಜಾಂಚಿ ಕಾರ್ತಿಕ್, ಸಹಕಾರ್ಯದರ್ಶಿ ವೀರಭದ್ರ ಸ್ವಾಮಿ ಮತ್ತು ಮಹಾತ್ಮಗಾಂಧಿ ಆಟೋ ನಿಲ್ದಾಣದ ಅಧ್ಯಕ್ಷ ಹರೀಶ್ ಬೆಳಕೇರಿ, ಪವನ್, ರಾಘು ಕುಮಾರ್ ಮತ್ತು ಜಯಕರ್ನಾಟಕ ಆಪೆ ಆಟೋ ನಿಲ್ದಾಣದ ಅಧ್ಯಕ್ಷ ಕುಮಾರ್ ಹಾಲೇಶಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಪಾದಯಾತ್ರೆ ತಡೆಗೆ ಹೂಡಿದ ತಂತ್ರವೇ ವೀಕೆಂಡ್ ಕರ್ಫ್ಯೂ

(1ನೇ ಪುಟದಿಂದ) ದಾಖಲೆಯತ್ತ ಸಾಗಿ, ಬೆಂಗಳೂರು ತಲುಪಿದರೆ ಬಿಜೆಪಿ ದೊಡ್ಡಮಟ್ಟದ ಹಿನ್ನಡೆ ಅನುಭವಿಸುತ್ತದೆ ಎಂಬ ಕಾರಣಕ್ಕೆ ಜನರ ನೀರಿನ ಸಮಸ್ಯೆಗೆ ಪ್ರಾಮಾಣಿಕ ಪ್ರಯತ್ನ ಮಾಡದೆ ತಮಿಳುನಾಡಿನಲ್ಲಿ ಬಿಜೆಪಿ ಬೆಳೆಯಲು ರಾಜ್ಯದ ಹಿತ ಕಡೆಗಣಿಸಿದ ಮೇಕೆದಾಟು ಪಾದಯಾತ್ರೆ ನಿಲ್ಲಿಸಲು ಹೂಡಿದ ತಂತ್ರವೇ ಈ ವೀಕೆಂಡ್ ಕರ್ಫ್ಯೂ ಎಂದರು.

ಮೇಕೆದಾಟು ಪಾದಯಾತ್ರೆ ಅಧಿಕೃತ ಘೋಷಣೆಯಾಗುತ್ತಿದಂತೆ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಸಿಕ್ಕ ಸಿಕ್ಕ ಜನರನ್ನು ಕೋವಿಡ್ ಟೆಸ್ಟಿಗೆ ಒಳಪಡಿಸಿ ಪಾಸಿಟಿವಿಟಿ ರೇಟ್ ಹೆಚ್ಚಿಸುವ ಪ್ರಯತ್ನಕ್ಕೆ ಕೈ ಹಾಕಿತು ಎಂದು ಹೇಳಿದರು. ಸಾವಿರ ಸಾವಿರ ಸಂಖ್ಯೆಯಲ್ಲಿ ಕೊರೊನಾ ಸೋಂಕಿತರು ಎಂದು ಪ್ರಚುರ ಪಡಿಸಲಾಯಿತು. ಬಿಜೆಪಿ ಕೊರೊನಾ ಬಗ್ಗೆ ಕಾಂಗ್ರೆಸ್ ನಾಯಕರು ಎಳೆಎಳೆಯಾಗಿ ಬಿಚ್ಚಿಟ್ಟರು. ಆದರೆ ಸರ್ಕಾರ ಜನರ ಕಣ್ಣಿಗೆ ಮಣ್ಣೆರಚಿತು.

ಪಾದಯಾತ್ರೆಯಿಂದ ಕೊರೊನಾ ಹೆಚ್ಚಾಗುತ್ತದೆ ಎನ್ನುವ ಹಸಿ ಸುಳ್ಳುಗಳನ್ನು ಹಬ್ಬಿಸಿದರು. ಜನಸಾಮಾನ್ಯರ ಆರೋಗ್ಯದ ಬಗ್ಗೆ ಎಲ್ಲರಿಗಿಂತಲೂ ಹೆಚ್ಚು ಕಾಳಜಿ ಇರುವ ಕಾಂಗ್ರೆಸ್ ಪಕ್ಷ ಜನರ ಆರೋಗ್ಯ ಹಾಗೂ ಕಾಂಗ್ರೆಸ್ ಹೈಕಮಾಂಡ್ ತೀರ್ಮಾನಕ್ಕೆ ಬದ್ದರಾಗಿ ಪಾದಯಾತ್ರೆಯನ್ನು ಅರ್ಧದಲ್ಲೇ ಮೊಟಕುಗೊಳಿಸಲಾಯಿತು.

ಕೊರೊನಾ ಹೆಸರಿನಲ್ಲಿ ಬಿಜೆಪಿ ಜನರನ್ನು ಯಾವ ರೀತಿ ಮರಳು ಮಾಡುತ್ತದೆ ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆ. ಆದರೆ ಜನ ಸಾಮಾನ್ಯರು ಬಿಜೆಪಿಯವರಂತೆ ಮೆದುಳು ಹೀನರಲ್ಲ. ಎಲ್ಲವನ್ನು ಗಮನಿಸುತ್ತಿದ್ದಾರೆ ಎಂಬುದು ನೆನಪು ಮಾಡಿಕೊಂಡರೆ ಒಳ್ಳೆಯದು ಎಂದರು.

# ವೀರಶೈವ ಮಹಾಸಭಾ ಮಹಿಳಾ ಘಟಕದಿಂದ ಪ್ರಸಾದ ವಿನಿಯೋಗ



ದಾವಣಗೆರೆ, ಜ.23- ತುಮಕೂರಿನ ಸಿದ್ದಗಂಗಾ ಮಠದ ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮಿಗಳ ಮೂರನೇ ವರ್ಷದ ಪುಣ್ಯ ಸ್ಮರಣೆ ಅಂಗವಾಗಿ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಮಹಿಳಾ ಘಟಕದ ವತಿಯಿಂದ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ನಡೆಸಲಾಯಿತು.

ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಪುಣ್ಯಸ್ಮರಣೆ ಅಂಗವಾಗಿ ಸಿದ್ದಗಂಗಾ ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಹಾಗೂ ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಮಹಾಸಭಾದ ಯುವ ಕಾರ್ಯಕಾರಿಣಿ ಸದಸ್ಯ ಶಿವನಗೌಡ ಟಿ. ಪಾಟೀಲ್, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಶೋಭಾ ಕೊಟ್ರೇಶ್, ಟಿಂಕರ್ ಮಂಜಣ್ಣ, ಕರೆಶಿವಪ್ಪರ ಸಿದ್ದೇಶ್, ಜಯಪ್ರಕಾಶ್ ಮಾಗಿ, ಕೊರಟಕೆರೆ ಶಿವಕುಮಾರ್, ಮೈಸೂರು ಮಠ ಮುಪ್ಪಯ್ಯ, ದ್ರಾಕ್ಷಿಯಣಿ ಅಂದಾನಪ್ಪ, ನಾಗಮಣಿ ಹಂಪಾಳಿ, ಶಶಿಕಲಾ ಬಡಿದಾಳ್, ಕೆ.ಇ. ಮಂಜುಳಾ, ರೇಖಾ ವಾಲಿ, ರುದ್ರಮ್ಮ ಇದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ 'ಎ' ಮತ್ತು ಬಿ ಬ್ಲಾಕ್, ಜಯನಗರ 'ಎ', 'ಬಿ' ಮತ್ತು 'ಸಿ' ಬ್ಲಾಕ್ ಭೂಮಿಕ ನಗರ ಜೆ.ಎನ್. ಕಾನ್ವೆಂಟ್, ಕೆಎಸ್ಎಸ್ ಕಾಲೇಜ್ ಮತ್ತು ಸುತ್ತ ಮುತ್ತ ಪ್ರದೇಶಗಳು, ಶಕ್ತಿನಗರ, ರಾಜೇಂದ್ರ ಬಡಾವಣೆ, ಜಯನಗರ 'ಬಿ' ಬ್ಲಾಕ್, ಬನಶಂಕರಿ ದೇವಸ್ಥಾನ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ರಾಜ್ಯದಲ್ಲಿ 50 ಸಾವಿರ ಸೋಂಕಿತರು ಪತ್ತೆ

ಬೆಂಗಳೂರು, ಜ. 23 – ರಾಜ್ಯದಲ್ಲಿ ಭಾನುವಾರ 50,210 ಕೊರೊನಾ ಸೋಂಕಿತರು ಪತ್ತೆಯಾಗಿದ್ದಾರೆ. ಇದೇ ದಿನ 19 ಜನ ಸೋಂಕಿನಿಂದ ಸಾವನ್ನಪ್ಪಿದ್ದಾರೆ.

ಮೇ 5, 2021ರ ನಂತರ ಎರಡನೇ ಬಾರಿಗೆ ರಾಜ್ಯದಲ್ಲಿ 50 ಸಾವಿರಕ್ಕೂ ಹೆಚ್ಚು ಸೋಂಕಿತರು ಪತ್ತೆಯಾಗಿದ್ದಾರೆ. ಬೆಂಗಳೂರಿನಲ್ಲಿ 26,299 ಸೋಂಕಿತರು ಕಂಡು ಬಂದಿದ್ದಾರೆ. ಮೈಸೂರಿನಲ್ಲಿ 4,359, ತುಮಕೂರಿನಲ್ಲಿ 1,963 ಹಾಗೂ ಹಾಸನದಲ್ಲಿ 1,922 ಸೋಂಕಿತರು ಪತ್ತೆಯಾಗಿದ್ದಾರೆ.

## ಅರ್ಜಿ ಆಹ್ವಾನ

ಜಗಳೂರು, ಜ.23- ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ರಾಜೀವ್‌ಗಾಂಧಿ ವಸತಿ ನಿಗಮದಿಂದ ಅರ್ಜಿ ಆಹ್ವಾನಿಸಲಾಗಿದೆ. ಇದೇ 25ರೊಳಗೆ ಪಟ್ಟಣ ಪಂಚಾಯಿತಿಗೆ ಅರ್ಜಿ ಸಲ್ಲಿಸಬಹುದು.

# ಪರದಾಡುತ್ತಿರುವ ನೇತಾಜಿ ಸ್ಥಾಪಿಸಿದ ಪಕ್ಷ

(1ನೇ ಪುಟದಿಂದ) ಹೇಮಂತ ಬಸು, ಎಸ್.ಬಿ. ಯಾಗಿ ಹಾಗೂ ಎಸ್.ಎಸ್. ಕವಿಶರ್ ಮತ್ತಿತರೆ ನಾಯಕರು ಫಾರ್ವರ್ಡ್ ಬ್ಲಾಕ್‌ನಲ್ಲಿದ್ದರು.

ಪಕ್ಷ ಹಲವು ಬಾರಿ ಒಡೆದಿದ್ದು ಮತ್ತು ಹಿರಿಯ ನಾಯಕರು ಬೇರೆ ಪಕ್ಷಗಳಿಗೆ ಹೋಗಿದ್ದು, ಫಾರ್ವರ್ಡ್ ಬ್ಲಾಕ್ ಕುಸಿತಕ್ಕೆ ಕಾರಣವಾಗಿದೆ ಎಂದು ಬಿಸ್ವಾಸ್ ಹೇಳಿದ್ದಾರೆ.

ನೇತಾಜಿ ಅವರ ನಂತರ ಪಕ್ಷವನ್ನು ಒಂದಾಗಿ ಹಿಡಿದಿಡುವ ಶಕ್ತಿ ಕಡಿಮೆಯಾಯಿತು. 1948ರಲ್ಲಿ ಪಕ್ಷ ಹಲವು ಬಾರಿ ಒಡೆಯಿತು. ಹಲವು ನಾಯಕರು ಫಾರ್ವರ್ಡ್ ಬ್ಲಾಕ್ ಅನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಲು ಬಯಸಿದ್ದರು. ಕೆಲವರು ಕಾಂಗ್ರೆಸ್ ಹಾಗೂ ಇತರೆ ಪಕ್ಷಗಳನ್ನು ಸೇರಿದರು. ಹಿರಿಯ ನಾಯಕರ ನಿಧನದ ನಂತರ ಪಕ್ಷಕ್ಕೆ ಆದ ನಷ್ಟ ಸರಿಪಡಿಸಲು ಆಗಲಿಲ್ಲ ಎಂದು ಬಿಸ್ವಾಸ್ ತಿಳಿಸಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದ ನಂತರ ಬೋಸ್ ಅವರು ಏಪ್ರಿಲ್ 1939ರಲ್ಲಿ ಫಾರ್ವರ್ಡ್ ಬ್ಲಾಕ್ ಸ್ಥಾಪಿಸಿದ್ದರು. ಇದರಲ್ಲಿ ಎಡಪಂಥೀಯರು ಹಾಗೂ ಸಮಾಜವಾದಿ ನಾಯಕರು ಸೇರ್ಪಡೆಯಾಗಿದ್ದರು. ಬೋಸ್ ಇದರ ಮೊದಲ ಅಧ್ಯಕ್ಷ ಹಾಗೂ ಹೆಚ್.ವಿ. ಕಾಮತ್ ಪ್ರಧಾನ ಕಾರ್ಯದರ್ಶಿಯಾಗಿದ್ದರು. ನಂತರ ಪಕ್ಷಕ್ಕೆ ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್ (ಎ.ಐ.ಎಫ್.ಬಿ.) ಎಂಬ ಹೆಸರಿಡಲಾಯಿತು. ನಂತರದ ವರ್ಷಗಳಲ್ಲಿ ಸಿಪಿಐ (ಎಂ) ನೇತೃತ್ವದ ಎಡರಂಗದ ಭಾಗವಾದ ಎ.ಐ.ಎಫ್.ಬಿ. ತನ್ನ ಸ್ವಂತ ಅಸ್ತಿತ್ವ ಕಳೆದುಕೊಳ್ಳುತ್ತಾ ಸಾಗಿತು. 2004ರ ಲೋಕಸಭೆಯಲ್ಲಿ ದೇಶದ ಒಟ್ಟು ಮತಗಳಲ್ಲಿ ಪಕ್ಷದ ಪಾಲು ಶೇ.0.35 ಇದ್ದದ್ದು, 2019ರ ವೇಳೆಗೆ ಶೇ.0.05ಕ್ಕೆ ಕುಸಿಯಿತು. ಪಶ್ಚಿಮ ಬಂಗಾಳದಲ್ಲಿ 2011ರಲ್ಲಿ ಪಕ್ಷದ ಪಾಲು ಶೇ.4.80 ಇದ್ದದ್ದು, 2021ರ ವೇಳೆಗೆ ಶೇ.0.53ಕ್ಕೆ ಕುಸಿಯಿತು. ಪಶ್ಚಿಮ ಬಂಗಾಳದಲ್ಲಿ ಕೆಲವೇ ಕಡೆ ಕೆಲವೇ ಪಂಚಾಯ್ತಿ ಸದಸ್ಯರು ಮಾತ್ರ ಎ.ಐ.ಎಫ್.ಬಿ.ಯಲ್ಲಿದ್ದಾರೆ.

ಯುವಕರನ್ನು ಸೆಳೆಯಲು ವಿಫಲವಾಗಿದ್ದು ಬಿಕ್ಕಟ್ಟಿಗೆ ಕೊಡುಗೆ ನೀಡಿವೆ. ನೇತಾಜಿ ಅವರ ಜೀವನ ಹಾಗೂ ಹೋರಾಟದ ಬಗ್ಗೆ ಯುವಕರಲ್ಲಿ ಗೌರವವಿದ್ದರೂ, ಅವರನ್ನು ಪಕ್ಷಕ್ಕೆ ತರಲು ಸಾಧ್ಯವಾಗಿಲ್ಲ. ನಾವೀಗ ಸದಸ್ಯರ ಚಂದಾ ಹಾಗೂ ದೇಣಿಗೆಗಳಿಂದ ಕಾರ್ಯ ನಿರ್ವಹಿಸುತ್ತಿದ್ದೇವೆ. ಪಕ್ಷ ಬಲಪಡಿಸಲು ಇಷ್ಟು ಸಾಲದು ಎಂದು ಎ.ಐ.ಎಫ್.ಬಿ. ರಾಜ್ಯ ಕಾರ್ಯದರ್ಶಿ ನರೇನ್ ಚಟರ್ಜಿ ಹೇಳಿದ್ದಾರೆ.

# ಜಿಲ್ಲೆಗೊಂದು ಪೀಠವಾದರೂ ಅಭ್ಯಂತರವಿಲ್ಲ

(1ನೇ ಪುಟದಿಂದ) ಇಲ್ಲಿಯವರೆಗಿನ ದಾಖಲೆಗಳನ್ನು ಒದಗಿಸಲಾಗಿದೆ. ಜಯಪ್ರಕಾಶ್ ಹೆಗಡೆ ಆಯೋಗವನ್ನು ಭೇಟಿ ಮಾಡಿ ಸುಮಾರು 6 ಗಂಟೆಗಳ ಕಾಲ ವಾದ ಮಂಡಿಸಲಾಗಿದೆ. ಇದರ ಜೊತೆಗೆ ಕಾನೂನಾತ್ಮಕ ಮತ್ತು ಸಂವಿಧಾನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ನಿಕಟ ಪೂರ್ವ ಪಂಚಮಸಾಲಿ ಸಮಾಜದ ಅಧ್ಯಕ್ಷ ಬಸವರಾಜ್ ದಿಂಡೂರು ಮಾತನಾಡಿ, ಪಂಚಮಸಾಲಿ ಸಮಾಜದ ಮೂರನೇ ಪೀಠದ ಸ್ಥಾಪನೆ ವಿಚಾರಕ್ಕೆ ಸಂಬಂಧಿಸಿದಂತೆ ಸಚಿವ ನಿರಾಣಿ ತೇಜೋವಧೆ ಮಾಡುವುದು ಸೂಕ್ತವಲ್ಲ. ಇದರಿಂದಾಗಿ ಸಮಾಜದಲ್ಲಿನ ಸಾಮರಸ್ಯ ಭಾವನೆಗೆ ದಕ್ಕೆ ಬರುತ್ತದೆ ಎಂದರು.

ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರು ತಾಕತ್ತು ಇದ್ದರೆ ನಿರಾಣಿ ಅವರಂತೆ ಕೆಲಸ ಮಾಡಿ ತೋರಿಸಲಿ. ಅದನ್ನು ಬಿಟ್ಟು ಪೇಪರ್ ಹೇಳಿಕೆ ಕೊಟ್ಟು ಪೇಪರ್ ಹುಲಿಯಾಗಬಾರದು ಎಂದರು.

2030 ರ ಸಂಕ್ರಾಂತಿ ವೇಳೆಗೆ ಜಿಲ್ಲೆಗೊಂದು ಪಂಚಮಸಾಲಿ ಪೀಠ ಸ್ಥಾಪನೆಯಾಗುತ್ತವೆ ಎಂದೂ ಅವರು ತಿಳಿಸಿದ್ದಾರೆ.

ರಾಜ್ಯ ಪಂಚಮಸಾಲಿ ಸಮಾಜದ ಕಾರ್ಯಾಧ್ಯಕ್ಷ ಸೋಮನಗೌಡ ಪಾಟೀಲ್ ಮಾತನಾಡಿ, ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮಿಗಳು ಮಾಡುವ ಹೋರಾಟ ಉತ್ತಮವಾಗಿಯೇ ಇರುತ್ತವೆ. ಆದರೆ, ಅವರು ಯಾವುದನ್ನೂ ಪೂರ್ಣವಾಗಿ ಮುಗಿಸಿಲ್ಲ. ಮಹದಾಯಿ ಹೋರಾಟ, 2 ಎ ಮೀಸಲಾತಿ, ಲಿಂಗಾಯತ ಧರ್ಮದ ಹೋರಾಟ ಇವುಗಳನ್ನು ಅರ್ಧಕ್ಕೆ ನಿಲ್ಲಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ನಿರಾಣಿ ಅವರನ್ನೂ ಮೂಲೆಗುಂಪು ಮಾಡಲು ಹೊರಟರೆ ಮೂಲ ಪಂಚಮಸಾಲಿ ಪೀಠದ ಭಕ್ತರು ಬೀದಿಗೆ ಇಳಿದು ಹೋರಾಟ ಮಾಡುತ್ತಾರೆ ಎಂದರು. ಚಂದ್ರಶೇಖರ್ ಉಪಸ್ಥಿತರಿದ್ದರು.

# ಕುಂಬಳೂರು: ಶಿವಕುಮಾರ ಶ್ರೀಗಳ ಪುಣ್ಯಾರಾಧನೆ




ಮಲೇಬೆನ್ನೂರು, ಜ.23- ಕುಂಬಳೂರು ಗ್ರಾಮದ ನಿಟ್ಟೂರು ಸರ್ಕಲ್‌ನಲ್ಲಿ ತ್ರಿವಿಧ ದಾಸೋಹಿ, ಕಾಯಕ ಯೋಗಿ, ಶತಮಾನದ ಸಂತ, ಪದ್ಮಭೂಷಣ, ನಡೆದಾಡುವ ದೇವರು ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳ 3 ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಗ್ರಾಮಸ್ಥರು ಅರ್ಥಪೂರ್ಣವಾಗಿ ಆಚರಿಸಿದರು.

ಶ್ರೀಗಳ ಪುಣ್ಯಸ್ಮರಣೆ ದಿನವನ್ನು ದಾಸೋಹ ದಿನವನ್ನಾಗಿ ಘೋಷಿಸಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ಇಡೀ ದಿನ ಅನ್ನ ದಾಸೋಹ ನಡೆಸಿದರು. ಕೆ. ಹೊಳೆಬಸಪ್ಪ, ನಾಗೋಳ್ ಕಲ್ಲೇಶ್ (ಬಾಬು), ಮಡಿವಾಳರ ಸಂಜೀವ್, ಎಂ. ವಾಸುದೇವಮೂರ್ತಿ, ಸಂಜಯ್ ಸ್ವಾಮಿ, ಗಂಗಾಧರಸ್ವಾಮಿ, ಬಾತಿ ಹನುಮೇಶ್, ಕೆ. ಕಾಮರಾಜ್, ನಾಗೋಳ ಮಂಜಣ್ಣ, ಧರ್ಮಾಚಾರಿ, ಹೆಚ್. ಶೇಖರಪ್ಪ, ನ್ಯಾಯಬೆಲೆ ಅಂಗಡಿ ವೀರೇಶ್ ಸೇರಿದಂತೆ, ಅನೇಕರು ಭಾಗವಹಿಸಿದ್ದರು.

# ನವ ಜೋಡಿಯೊಂದಿಗೆ ನೇತಾಜಿ ಜನ್ಮ ದಿನಾಚರಣೆ



ಹರಿಹರ, ಜ. 23 - ಇಲ್ಲಿನ ಮಹರ್ಷಿ ವಾಲ್ಮೀಕಿ ಗುರುಪೀಠದ ಆವರಣದಲ್ಲಿರುವ ಪುಣ್ಯಕೋಟಿ ಮಠದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮ ದಿನಾಚರಣೆಯೊಂದಿಗೆ ಧನ್ಯೋಸ್ಮಿ ಭರತ ಭೂಮಿ ಸದಸ್ಯ ಹರೀಶ್ ಹಾಗೂ ಗೀತಾ ಅವರ ಮದುವೆ ನೆರವೇರಿತು.

ಧನ್ಯೋಸ್ಮಿ ಭರತಭೂಮಿ ಅಧ್ಯಕ್ಷ ಚರಣ್ ಅಂಗಡಿ ಮಾತನಾಡಿ, ಸುಭಾಷ್ ಚಂದ್ರ ಬೋಸ್ ರ 125ನೇ ಜನ್ಮ ದಿನಾಚರಣೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮ ತಂಡದ ಸದಸ್ಯರಾದ ಹರೀಶ್ ಹಾಗೂ ಗೀತಾರವರ ಮದುವೆ ರಾಷ್ಟ್ರ ಪ್ರೇಮ ಹಾಗೂ ದೇಶ ಭಕ್ತಿಯ ಸಂದೇಶ ನೀಡಲಿ ಎಂದರು.

ಸಂಘದ ಗೌರವಾಧ್ಯಕ್ಷ ಡಾ|| ಜಿ. ಜೆ. ಮೆಹೆಂದಳೆ ಮತ್ತು ಪತ್ನಿ ಶಕುಂತಲಾ ಮೆಹೆಂದಳೆ, ಸಾತ್ವಿಕ್ ಮೆಹೆಂದಳೆ, ಕೋಡಿಯಾಲ ಪಂಚಾಯ್ತಿ ಅಧ್ಯಕ್ಷ ಚೇತನ ಪೂಜಾರ್, ತಂಡದ ವಾಗ್ಮಿ ಗುರುಪ್ರಸಾದ್ ಆನ್ವೇರಿ, ವಿಜಯ ಉದಗಟ್ಟಿ, ಮಿಥುನ ಕಟವಟೆ, ಆರ್. ಆರ್. ಹರೀಶ, ಬಿ. ಸಿ. ಮಧು, ಕೆ. ಬಿ. ವಿಜಯ, ಗೋಣಿಬಸಪ್ಪ, ನಾಗರಾಜ ಕುಂಬಾರ್, ಸಿಗ್ಬತ್ ಉಲ್ಲಾ, ಶ್ಯಾಮ್, ಎಲ್ಲಪ್ಪ, ಸಿದ್ದು ಕುಂಬಾರ್, ಎಂ. ಕೆ. ಗಣೇಶ, ಎಂ.ಎನ್. ಮಲ್ಲೇಶಪ್ಪ, ಛಾಯಾಗ್ರಾಹಕ ಸಿದ್ದಾರ್ಥ ಯಡಿಯಾಪುರ ಉಪಸ್ಥಿತರಿದ್ದರು.


**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**ಸೈಟ್ ಮಾರಾಟಕ್ಕೆ**
ದಾವಣಗೆರೆ ಎಸ್‌ಪಿ ಕಚೇರಿ ಎದುರುಗಡೆ ಇರುವ ಸ.ನಂ. 127/2ಎ2, 30x50 (ಉತ್ತರ) ಅಳತೆಯ ಖಾಲಿ ನಿವೇಶನ ಮಾರಾಟಕ್ಕಿದೆ. ಸಂಪರ್ಕಿಸಿ:
99804 38600
72596 78135

**ಬೇಕಾಗಿದ್ದಾರೆ**
ದಾವಣಗೆರೆ ಸುತ್ತ-ಮುತ್ತ ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಲಾಡ್ಜ್‌ನಲ್ಲಿ ಕೆಲಸ ಮಾಡಲು ರೂಂ ಬಾಯ್, ರಿಸೆಪ್ಷನಿಸ್ಟ್ ಕೆಲವು ಕಡೆ ಊಟದ ವ್ಯವಸ್ಥೆ ಇರುತ್ತದೆ. ಆಕರ್ಷಕ ಸಂಬಳವಿರುತ್ತದೆ. ಕೂಡಲೇ ಸಂಪರ್ಕಿಸಿರಿ
74113 07071, 98806 48207

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತುಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಬೆಡ್ ರೂಂ, ಪೂಜಾ ರೂಂ ಇರುವ ಏಳೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ.
79750 35395

**ಬೇಕಾಗಿದ್ದಾರೆ**
ಅಕೌಂಟೆಂಟ್ (1), ಸೇಲ್ಸ್ ಮ್ಯಾನ್ (2)
ವಿದ್ಯಾರ್ಹತೆ : 2nd PUC
ಅನುಭವವುಳ್ಳವರಿಗೆ ಮೊದಲ ಆದ್ಯತೆ
ಸಂಪರ್ಕಿಸಿ : ಪೂಜಾ ಹಾರ್ಡ್‌ವೇರ್
ಅರುಣ ಟಾಕೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ.

**ಬೇಕಾಗಿದ್ದಾರೆ**
1. ಹರಿಹರದ ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
2. ಹೊಲದಲ್ಲಿ ಇದ್ದುಕೊಂಡೇ ಕೆಲಸ ಮಾಡಲು ಓರ್ವರು ಆಳು ಬೇಕಾಗಿದ್ದಾರೆ.
70185 88900
95388 70257

**Urgent House For Sale**
30x40 House, Ground Floor & 1st Floor at High Tech Hospital Road, Jayanagara 'A' Block, Near Yogi Reddy Building.
Contact : 86187 39278 (Umadevi)

**ಮಾರಾಟಕ್ಕಿವೆ**
ಉತ್ತಮ ತಳಿಯ ಅಡಿಕೆ ಸಸಿ ಮಾರಾಟಕ್ಕೆ ಲಭ್ಯವಿವೆ ದಾವಣಗೆರೆಯಲ್ಲಿ (ದೊಡ್ಡ ಬಾತಿ) ಸಂಪರ್ಕಿಸಿ :
88920 08800

**ಮನೆ ಬಾಡಿಗೆಗೆ ಇದೆ**
2 ಬೆಡ್‌ರೂಂ, 2 ಬಾತ್‌ರೂಂ, ಲಿಫ್ಟ್ ಇರುವ 2 ಮನೆಗಳು ಮಹಾಲಕ್ಷ್ಮಿ ಲೇಔಟ್‌ನ ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ ಬಾಡಿಗೆಗೆ ಇವೆ. ಸಂಪರ್ಕಿಸಿ:
96388 17967
73380 43912

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಮನೆ ಬಾಡಿಗೆಗೆ/ಲೀಸ್‌ಗೆ**
ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತದಲ್ಲಿ 2 ಬೆಡ್ ರೂಂ ಇರುವ 30x40 ಅಳತೆಯ ಮೊದಲ ಮಹಡಿ ಮನೆ ಬಾಡಿಗೆಗೆ/ಲೀಜ್‌ಗೆ ದೊರೆಯುತ್ತದೆ.
ಮೊ : 97317 99571

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**PHOTOSHOP & CORELDRAW**
C,C++, JAVA, PYTHON, SCHOOL PROJECTS
ISO & AICTE APPROVED
Ph : 89712 79127

**ಬೇಕಾಗಿದ್ದಾರೆ**
ಮಗು ನೋಡಿಕೊಳ್ಳಲು ನಮ್ಮ ಮನೆಯಲ್ಲಿಯೇ ಇರುವುದಕ್ಕೆ ಕೆಲಸದವರು ಬೇಕಾಗಿದ್ದಾರೆ. ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ.
73530 39444

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**ಸೈಟ್ ಮಾರಾಟಕ್ಕೆ ಇದೆ**
ಮಹಾಲಕ್ಷ್ಮಿ ಲೇಔಟ್, ಶಿವಗಂಗೆ ಕಲ್ಯಾಣ ಮಂಟಪದ ಹಿಂಭಾಗದ 40 ಅಡಿ ರಸ್ತೆಗೆ 41x91 ದಕ್ಷಿಣ ದಿಕ್ಕಿನ ಸೈಟ್ ಮಾರಾಟಕ್ಕಿದೆ. ವಿಚಾರಿಸಿ:
98448 82366

**ಅಗರಬತ್ತಿ ಮಾರಾಟ ಮತ್ತು ಖರೀದಿ ಕೇಂದ್ರ**
ಪ್ರೈವೇಟ್ ಬಸ್ ಸ್ಟ್ಯಾಂಡ್ ಸ್ಟಾಲ್ ನಂ.5
89517 16682

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**WANTED**
Wanted actors for upcoming Kannada Comedy Film ಅನಂತರ ಕಿಸಾನ್ ಟಿವಿ Auditions from 24th Jan onwards at sunshine animations, Davangere. For Appointment :
86609 55913, 99644 89204
www.kbtv.in

**REQUIRED**
Telicalling only for female (freshers/Experienced), Reception also, Marketing executive for Institution Minimum 1year experience Location:- Davangere. Contact
9606692888, 8296376716

**House for Rent**
Ground floor, 1 BHK, AEH, Corpn & Borewell water Facility with all ammenities #1885/74, Jain Layout, 2nd Main Enterance, Kunduvada Road, Davangere - 6.
99862 26977

**ಹುಡುಗರು ಬೇಕಾಗಿದ್ದಾರೆ**
ಪೈಪ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
98443 26605

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ


# ಪಾಮೇನಹಳ್ಳಿ: ಸಿದ್ಧರಾಮೇಶ್ವರ ಜಯಂತಿ



ದಾವಣಗೆರೆ,ಜ.23- ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾ ಗುರುಗಳ ಕೃಪಾಶೀರ್ವಾದದಿಂದ ತೋಳಹುಣಸೆ ಗ್ರಾಮ ಪಂಚಾಯಿತಿಯ ಪಾಮೇನಹಳ್ಳಿಯಲ್ಲಿ ಕುಲ ದೇವರು ಶ್ರೀ ಸಿದ್ಧರಾಮೇಶ್ವರ ಜಯಂತಿಯನ್ನು ಸರಳ ಮತ್ತು ಸಾಂಕೇತಿಕವಾಗಿ ಆಚರಿಸಲಾಯಿತು. ಭೋವಿ ಸಮಾಜದ ಜಿಲ್ಲಾ ಗೌರವಾಧ್ಯಕ್ಷ ಬಿ. ಟಿ. ಸಿದ್ದಪ್ಪ, ಜಿಲ್ಲಾಧ್ಯಕ್ಷ ಹೆಚ್. ಜಯಣ್ಣ, ಮಹಿಳಾ ಜಿಲ್ಲಾಧ್ಯಕ್ಷರಾದ ಶ್ರೀಮತಿ ಉಮಾ ಕುಮಾರ್, ಯುವ ಘಟಕದ ಜಿಲ್ಲಾಧ್ಯಕ್ಷ ಎ. ಬಿ. ನಾಗರಾಜ್, ಜಿಲ್ಲಾ ಕಾರ್ಯಾಧ್ಯಕ್ಷ ಗೋಪಾಲ್, ಜಿಲ್ಲಾ ನಿರ್ದೇಶಕ ನಾಗರಾಜಪ್ಪ ಮತ್ತು ಗ್ರಾಮಸ್ಥರಾದ ಬಸವರಾಜಪ್ಪ (ಗ್ರಾ. ಪಂ. ಸದಸ್ಯರು) ಹನುಮಂತಪ್ಪ, ರುದ್ರಣ್ಣ, ಭೀಮಣ್ಣ, ಬಸಪ್ಪ, ಡಿಶ್ ಕೃಷ್ಣಮೂರ್ತಿ, ಪೂಜಾರಿ ನಾಗಣ್ಣ, ಗೌಡ್ರು ಶೇಖರಣ್ಣ, ಪೆದ್ದಪ್ಪ, ಮಲ್ಲೇಶಪ್ಪ, ತಿರ್ಲಪ್ಪ, ಅಂಜನಪ್ಪ, ಪರಮೇಶಪ್ಪ, ಡಿ. ಎಂ. ಮಂಜುನಾಥ್, ಶಿವಮೂರ್ತಿ, ಶ್ರೀಮತಿ ಈರಮ್ಮ ನೇತ್ರಮ್ಮ, ಶಾರದಮ್ಮ, ಸುಜಾತ, ಯುವ ಮುಖಂಡರಾದ ಪ್ರಶಾಂತ್, ಪ್ರದೀಪ್, ಮಂಜು, ಶಿವಕುಮಾರ್, ಸಂತೋಷ, ಪಿ.ಎಂ. ರಾಜು, ಅಜ್ಜಯ್ಯ, ನಾಗರಾಜ್, ಕರಿಬಸಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಜ.23- ನಗರದ ಪಿ.ಬಿ. ರಸ್ತೆಯ ಎಸ್‌ಬಿಐ ಬಳಿ ಸುಮಾರು 65 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದೆ.

ಅನಾಮಧೇಯ ವ್ಯಕ್ತಿ ಅನಾರೋಗ್ಯದಿಂದ ಬಳಲಿ ಬಿದ್ದಿದ್ದು, ಈತನನ್ನು ಚಿಕಿತ್ಸೆಗಾಗಿ ಸಿ.ಜಿ. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ. ಮುಖದ ಬಲಭಾಗ ಹಾಗೂ ಎದೆಯ ಎಡ ಭಾಗದಲ್ಲಿ ಹಳೆಯ ಗಾಯದ ಗುರುತು ಇದ್ದು, ಕಿವಿ ಚುಚ್ಚಿರುವುದಿಲ್ಲ. ತೆಳು ಮೈಕಟ್ಟು, ಕೋಲು ಮುಖ, ಆಕಾಶ ನೀಲಿ ಬಣ್ಣದ ಅಂಗಿ, ಬೂದಿ ಬಣ್ಣದ ನೈಟ್ ಪ್ಯಾಂಟ್ ಧರಿಸಿರುತ್ತಾರೆ. ಸಂಬಂಧಪಟ್ಟವರು ಕೆಟಿಜೆ ನಗರ ಪೊಲೀಸ್ ಠಾಣೆ (08192-259285, 08192-259293) ಸಂಪರ್ಕಿಸಬಹುದು.

## ಅಪರಿಚಿತ ಮಹಿಳೆಯ ಶವ ಪತ್ತೆ

ದಾವಣಗೆರೆ, ಜ.23- ಇಎಸ್‌ಐ ಆಸ್ಪತ್ರೆ ಬಳಿ 55 ರಿಂದ 60 ವರ್ಷ ವಯಸ್ಸಿನ ಅಪರಿಚಿತ ಮಹಿಳೆಯ ಶವ ಪತ್ತೆಯಾಗಿದೆ.

ಹಣೆ ಮತ್ತು ಗದ್ದದ ಮೇಲೆ ಹಚ್ಚೆ ಗುರುತು, ತೆಳು ಮೈಕಟ್ಟು, ದುಂಡು ಮುಖ, ಕೆಂಪು ಬಣ್ಣದ ನೈಟಿ ಧರಿಸಿರುವ ಈಕೆಯ ವಾರಸುದಾರರಿದ್ದಲ್ಲಿ ಕೆಟಿಜೆ ನಗರ ಪೊಲೀಸ್ ಠಾಣೆಯನ್ನು (08192-259293, 08192-259285) ಸಂಪರ್ಕಿಸಬಹುದು.

**ಬಿ.ಕಲಪನಹಳ್ಳಿ ಬಸಮ್ಮ ನಿಧನ**



ದಾವಣಗೆರೆ ತಾಲ್ಲೂಕು ಬಿ.ಕಲಪನಹಳ್ಳಿ ಗ್ರಾಮದ ವಾಸಿ ದಿ|| ಪೂಜಾರ್ ಶಿವರುದ್ರಪ್ಪ ಇವರ ಪತ್ನಿ

**ಶ್ರೀಮತಿ ಬಸಮ್ಮ**

ಇವರು, ದಿನಾಂಕ 23.01.2022 ರ ಭಾನುವಾರ ಮಧ್ಯಾಹ್ನ 12.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.01.2022 ರ ಭಾನುವಾರ ರಾತ್ರಿ 7.30 ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ

ಮೊ : 93410 11330, 90352 46198

**ಅಣ್ಣಾಪುರದ ಗೌಡ್ರ ಲಲಿತಮ್ಮ ನಿಧನ**



ದಾವಣಗೆರೆ ತಾಲ್ಲೂಕು ಅಣ್ಣಾಪುರ ಗ್ರಾಮದ ಶ್ರೀ ಸಣ್ಣಗೌಡ್ರ ಚಂದ್ರಪ್ಪ ಅವರ ಧರ್ಮಪತ್ನಿ

**ಶ್ರೀಮತಿ ಲಲಿತಮ್ಮ**

ಅವರು ದಿನಾಂಕ 23.1.2022ರ ಭಾನುವಾರ ಸಂಜೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 78 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು, ಅಳಿಯ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.1.2022ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಹೊನ್ನೂರು ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ

**ಆರ್. ಸವಿತಾ ನಿಧನ**



ದಾವಣಗೆರೆ ಮೌನೇಶ್ವರ ಬಡಾವಣೆ ವಾಸಿ ಆರ್. ಕಾಶಿನಾಥ್ ಇವರ ಪತ್ನಿ ಆರ್. ಸವಿತಾ (51) ಇವರು ದಿನಾಂಕ 23.01.2022 ರ ಭಾನುವಾರ ಮಧ್ಯಾಹ್ನ 3.30 ಕ್ಕೆ ನಿಧನರಾದರು. ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 24.01.2022 ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ಉಚ್ಚೆಂಗಮ್ಮ ನಿಧನ**



ದಾವಣಗೆರೆ ಎಸ್.ಪಿ.ಎಸ್. ನಗರ, 2ನೇ ಹಂತದ ವಾಸಿ ಶೀಮತಿ ಉಚ್ಚೆಂಗಮ್ಮ (68) ಇವರು ದಿನಾಂಕ 23.01.2022 ರಂದು ಭಾನುವಾರ ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು 3 ಜನ ಪುತ್ರರು, 5 ಜನ ಪುತ್ರಿಯರು ಮತ್ತು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ, ಮೃತರ ಅಂತ್ಯಕ್ರಿಯೆಯು ದಿ.24.01.2022 ರಂದು ಮಧಾಹ್ನ 1 ಗಂಟೆಗೆ ಗಾಂಧಿ ನಗರದ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ.

# ಗ್ರಾಮೀಣ ಮಕ್ಕಳು ನಗರ ಪ್ರದೇಶದ ಮಕ್ಕಳಿಗೆ ಪೈಪೋಟಿ ನೀಡಬೇಕು



ಮಲೇಬೆನ್ನೂರು, ಜ.23- ಗ್ರಾಮಾಂತರ ಪ್ರದೇಶದ ಮಕ್ಕಳು ತಂತ್ರ ಜ್ಞಾನದ ಪ್ರಯೋಜನ ಪಡೆದುಕೊಂಡು, ನಗರ ಪ್ರದೇಶದ ಮಕ್ಕಳಿಗೆ ಪೈಪೋಟಿ ನೀಡಬೇಕೆಂದು ಜಿಲ್ಲಾ ಪಂಚಾಯತ್ ಅವರು ವಯಸ್ಕರ ಶಿಕ್ಷಣಾಧಿಕಾರಿ ಮಹೇಶ್ ದೊಡ್ಡಮನಿ ಕರೆ ನೀಡಿದರು.

ಶುಕ್ರವಾರ ಜಿ. ಎಮ್. ಸಿ. ಜಿ. ಪ್ರೌಢಶಾಲೆಗೆ ಬೆಂಗಳೂರಿನ ಸಾಫ್ಟ್ ವೇರ್ ಇಂಜಿನಿಯರ್ ಕಿರಣ್‌ಕುಮಾರ್ ನೀಡಿದ ಪ್ರೊಜೆಕ್ಟರ್ ಸ್ವೀಕರಿಸಿ ಮಾತನಾಡಿದರು,

ಗ್ರಾಮೀಣ ಪ್ರದೇಶದಲ್ಲಿನ ಶಾಲಾ ಮಕ್ಕಳು ನಗರ ಪ್ರದೇಶದ ಖಾಸಗಿ ಶಾಲಾ ಮಕ್ಕಳಂತೆ ಅಂತರ್ಜಾಲದ ಪ್ರಯೋ ಜನ ಪಡೆದುಕೊಳ್ಳಬೇಕು. ಇಂದು ಶಿಕ್ಷಣದ ಪ್ರತಿ ಹಂತದಲ್ಲೂ ಗಣಕ ಯಂತ್ರ ಅಂತರ್ಜಾಲ ಹಾಸು ಹೊಕ್ಕಾಗಿದೆ. ಅಂತರ್ಜಾಲವನ್ನು ಸಮ ರ್ಪಕವಾಗಿ ಬಳಸಿಕೊಂಡು ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆಂದು ಹೇಳಿದರು.

**ಜಿ.ಪಂ. ವಯಸ್ಕರ ಶಿಕ್ಷಣಾಧಿಕಾರಿ ಮಹೇಶ್ ದೊಡ್ಡಮನಿ**

ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ರಾಮಕೃಷ್ಣಪ್ಪ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿನ ಮಕ್ಕಳ ಕಲಿಕೆಗೆ ಪ್ರೊಜೆಕ್ಟರ್ ತುಂಬಾ ಸಹಕಾರಿಯಾಗಿದೆ. ಇದನ್ನು ಸದ್ಬಳಕೆ ಮಾಡಿಕೊಂಡರೆ ಉನ್ನತ ಮಟ್ಟ ತಲುಪಲು ಸಾಧ್ಯ ಎಂದರು.

ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಅಧ್ಯಕ್ಷಡಿ.ಎಂ. ಮಂಜುನಾಥಯ್ಯ, ಮುಖ್ಯ ಶಿಕ್ಷಕ ಗುರುಬಸಯ್ಯ, ಅಕ್ವೀನ್ ಸಂಸ್ಥೆಯ ಬಸಯ್ಯ ಹಿರೇಮಠ್, ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ ಕುಮಾರ್ ಹೆಗಡೆ, ಬಸವರಾಜ್, ಕರಿಬಸಪ್ಪ ಬಸಲೆ, ಸಂತೋಷ್, ಮಲ್ಲಪ್ಪ, ರುದ್ರಪ್ಪ. ಶಂಕರ್ ನಾಯಕ್ ಹಾಜರಿದ್ದರು,

# ಪರಿಹಾರ ಬೇಕಾಗಿಲ್ಲ, ನಮ್ಮ ಭೂಮಿ ನಾವು ಬಿಟ್ಟು ಕೊಡುವುದಿಲ್ಲ

ದಾವಣಗೆರೆ, ಜ.23- ಹೈಟೆನ್ಷನ್ ವಿದ್ಯುತ್ ಲೈನ್ ಅಳವಡಿಸುವ ಸಲುವಾಗಿ ರೈತರ ಒಪ್ಪಿಗೆ ಇಲ್ಲದೆ ಒತ್ತಾಯಪೂರ್ವಕವಾಗಿ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಗೆ ಕೆಪಿಟಿಸಿಎಲ್ ಮುಂದಾಗಿರುವುದಕ್ಕೆ ರೈತರು ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಶಿವಮೊಗ್ಗ ಜಿಲ್ಲಾ ಸಂಚಾಲಕ ಆರ್. ಪ್ರಕಾಶ್ ಲಿಗಾಡಿ ನಿನ್ನೆ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಚನ್ನಗಿರಿ ತಾಲ್ಲೂಕು ಉಬ್ರಾಣಿ ಹೋಬಳಿಯ ವಡ್ನಾಳ್ ಬನ್ನಿಹಟ್ಟಿ ಮತ್ತು ಅರಳಕಟ್ಟಿ ಗ್ರಾಮಗಳಲ್ಲಿ ಚಿತ್ರದುರ್ಗ ಕೆಪಿಟಿಸಿಎಲ್ ಬೃಹತ್ ಕಾಮಗಾರಿ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರೈತರ ಜಮೀನುಗಳಲ್ಲಿ ವಿದ್ಯುತ್ ಲೈನ್ ಅಳವಡಿಸುವ ಅನಧಿಕೃತ ಕಾಮಗಾರಿಗೆ ಮುಂದಾಗಿದ್ದು, ರೈತರಿಗೆ ಯಾವುದೇ ರೀತಿಯ ನೋಟಿಸ್ ನೀಡದೇ, ರೈತರ ಸಭೆ ಕರೆದು ಚರ್ಚಿಸದೇ ಮನಸೋ ಇಚ್ಛೆ ನೀಲ ನಕ್ಷೆ ತಯಾರಿಸಿ, ರೈತರ ಜಮೀನು ಸ್ವಾಧೀನಪಡಿಸಿ ಕೊಳ್ಳುತ್ತಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ ಎಂದರು.

**ವಿದ್ಯುತ್ ಲೈನ್ ಅಳವಡಿಕೆ: ಕೆಪಿಟಿಸಿಎಲ್ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯ**

ಹೊಸದುರ್ಗ ತಾಲ್ಲೂಕು ಮಧುರೆ ಗ್ರಾಮದ ಸಮೀಪ ಹೊಸದಾಗಿ ನಿರ್ಮಾಣ ಮಾಡುತ್ತಿರುವ ವಿದ್ಯುತ್ ಪ್ರಸರಣ ಕೇಂದ್ರದಿಂದ ಚನ್ನಗಿರಿ ತಾಲ್ಲೂಕು ಬೆಂಕಿಕೆರೆ ಬಳಿ ನಿರ್ಮಿಸುತ್ತಿರುವ ವಿದ್ಯುತ್ ಸ್ವೀಕರಣಾ ಕೇಂದ್ರ ಅವೈಜ್ಞಾನಿಕವಾಗಿವೆ. ನಮಗೆ ಸರ್ಕಾರದ ಪರಿಹಾರ ಬೇಕಾಗಿಲ್ಲ. ನಮ್ಮ ಭೂಮಿ ನಾವು ಬಿಟ್ಟು ಕೊಡುವುದಿಲ್ಲ ಎಂದರು.

ಕೆಪಿಟಿಸಿಎಲ್ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು, ಕಂದಾಯ ಮಂತ್ರಿಗಳು, ಇಂಧನ ಸಚಿವರೂ ಸೇರಿದಂತೆ ಸಚಿವರು, ಉನ್ನತ ಅಧಿಕಾರಿಗಳಿಗೆ ದೂರು ಸಲ್ಲಿಸಿರುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಾರಾಯಣಮೂರ್ತಿ, ಸುಧಾ, ರಾಜಪ್ಪ, ನಾಗರಾಜಪ್ಪ, ಕುಮಾರಪ್ಪ ವಡ್ನಾಳ್, ಪ್ರಸನ್ನಚಾರ್ ಮತ್ತಿತರರಿದ್ದರು.

# ಸಂಸದ ಸಿದ್ದೇಶ್ವರರ ಸಾಧನೆ ಶೂನ್ಯ : ಡಿ.ಬಿ. ಆರೋಪ

ದಾವಣಗೆರೆ, ಜ.23- ಕಳೆದ 25 ವರ್ಷಗಳಿಂದ ಸಂಸದರಾಗಿ ಆಡಳಿತ ನಡೆಸುತ್ತಿರುವ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕಣ್ಣಿಗೆ ಕಾಣುವಂತಹ ಒಂದೇ ಒಂದು ಶಾಶ್ವತ ಅಭಿವೃದ್ಧಿ ಕೆಲಸ ಮಾಡಿಲ್ಲ. ಲೋಕಸಭಾ ಕ್ಷೇತ್ರದಲ್ಲಿ ಅವರ ಸಾಧನೆ ಶೂನ್ಯ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಆರೋಪಿಸಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ನಡೆಸಿದ ಸಂದರ್ಭದಲ್ಲಿ ನಗರದಲ್ಲಿ ಸಾವಿರಾರು ಆಶ್ರಯ ಮನೆಗಳ ನಿರ್ಮಾಣ, ಕುಂದುವಾಡ ಕೆರೆ ನಿರ್ಮಾಣ, ಗಾಜಿನ ಮನೆ ನಿರ್ಮಾಣ, ಸ್ಮಾರ್ಟ್ ಸಿಟಿ ಯೋಜನೆ ಅನುಷ್ಠಾನ, ಜಲಸಿರಿ 24×7 ಕುಡಿಯುವ ನೀರಿನ ಯೋಜನೆಗೆ ಚಾಲನೆ, ವಿದ್ಯುತ್ ಇಲಾಖೆಯಿಂದ ಯುಜಿ ಕೇಬಲ್ ಅಳವಡಿಕೆ, ನಗರದಲ್ಲಿ ಸಿಮೆಂಟ್ ರಸ್ತೆಗಳ ನಿರ್ಮಾಣ, ದೂಡಾದ ಮುಂಭಾಗ ಮೇಲ್ಸೆತುವೆ ಹಾಗೂ ಎಪಿಎಂಸಿ ಬಳಿ ಮೇಲ್ಸೆತುವೆ ನಿರ್ಮಾಣ ಸೇರಿದಂತೆ ಅನೇಕ ಶಾಶ್ವತ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿದ ಕೀರ್ತಿ ಎಸ್ಸೆಸ್ ಹಾಗೂ ಎಸ್ಸೆಸ್ಸೆಂ ಅವರಿಗೆ ಸಲ್ಲುತ್ತದೆ ಎಂದರು.

**ಸಂಸದರಿಗೆ ಜಿಲ್ಲೆಯ ಬಗ್ಗೆ ಕಾಳಜಿ ಇದ್ದರೆ ವಿಶೇಷ ಅನುದಾನ ತಂದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಿ. ಜೊತೆಗೆ ಸಾಫ್ಟ್‌ವೇರ್ ಪಾರ್ಕ್ ನಿರ್ಮಿಸುವ ಮೂಲಕ ಯುವ ಜನರಿಗೆ ಉದ್ಯೋಗ ನೀಡುವ ಕೆಲಸ ಮಾಡಲಿ.**

**- ಎ. ನಾಗರಾಜ್,**
ವಿಪಕ್ಷ ನಾಯಕರು
ನಗರ ಪಾಲಿಕೆ.

ಸಂಸದ ಸಿದ್ದೇಶ್ವರ ಅವರು ತಮ್ಮ ಅವಧಿಯಲ್ಲಿ ಡಿಸಿಎಂ ಟೌನ್‌ಶಿಪ್ ಹಾಗೂ ಶಿರಮಗೊಂಡನಹಳ್ಳಿ ಬಳಿ ಅಂಡರ್‌ಪಾಸ್ ಹಾಗೂ ರೈಲ್ವೆ ನಿಲ್ದಾಣ ನವೀಕರಣ ಕಾಮಗಾರಿ ಹೊರತುಪಡಿಸಿ, ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿಲ್ಲ ಎಂದು ದೂರಿದರು.

ನೆನೆಗುದಿಗೆ ಬಿದ್ದಿರುವ ಅಶೋಕ ಟಾಕೀಸ್ ಬಳಿಯ ರೈಲ್ವೆ ಗೇಟ್ ಸಮಸ್ಯೆಯನ್ನೇ ಬಗೆಹರಿಸದ ಸಂಸದರು ವಿಮಾನ ನಿಲ್ದಾಣ ಮಂಜೂರಾತಿಗೆ ಕೈಹಾಕಿರುವುದು ಹಾಸ್ಯಾಸ್ಪದ. ಸಂಸದರ ಅಭಿವೃದ್ಧಿ 'ಖಾಲಿ ಡಬ್ಬ ಸೌಂಡ್ ಜಾಸ್ತಿ' ಎನ್ನುವಂತಾಗಿದೆ ಎಂದು ಬಸವರಾಜ್ ಲೇವಡಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಸದಸ್ಯರುಗಳಾದ ಕೆ.ಚಮನ್‌ಸಾಬ್, ಗಡಿಗುಡಾಳ್ ಮಂಜುನಾಥ್, ಮುಖಂಡರಾದ ಗಣೇಶ್ ಹುಲ್ಮನಿ, ಲಿಯಾಖತ್ ಅಲಿ, ಸಲ್ಮಾನ್ ಮತ್ತಿತರರು ಉಪಸ್ಥಿತರಿದ್ದರು.

# ಕುರ್ಕಿಯಲ್ಲಿ ವಿಠಲ ರುಖುಮಾಯಿ ದಿಂಡಿ ಉತ್ಸವ



ದಾವಣಗೆರೆ, ಜ.23- ತಾಲ್ಲೂಕಿನ ಕುರ್ಕಿ ಗ್ರಾಮದ ಬುಳ್ಳಾಪುರ ಗ್ರಾಮದಲ್ಲಿ ಶ್ರೀ ವಿಠ್ಠಲ ರುಖುಮಾಯಿ ದೇವರ ದಿಂಡಿ ಉತ್ಸವ ಇಂದು ಜರುಗಿತು. ನೂತನ ವಿಠ್ಠಲ ರುಖುಮಾಯಿ ದೇವರ ದೇವಸ್ಥಾನವನ್ನು ಅತಿ ಶೀಘ್ರದಲ್ಲೇ ಕಾರ್ತಿಕ ಮಾಸದಲ್ಲಿ ನಿರ್ಮಾಣವಾಗಲಿ ಎಂದು ಗ್ರಾಮದ ಎಲ್ಲಾ ಭಕ್ತರು ವಾರಕರಿ ಸಂತರು ಹಾರೈಸಿ ವಾಗ್ದಾನ ನೀಡಿದರು.

ವಾರಕರಿ ಸಂತರು ಕೀರ್ತನೆ, ಕಾಕಡಾರತಿ ಭಜನೆಯನ್ನು ನಿಂಗಸ್ವಾಮಿ ರಾವ್ ಖಮಿತ್ಕರ್ ಶ್ರೀ ಹ.ಭ.ಪ ಮಾರುತಿ ವಂಟಕರ್ ಮಂಜುನಾಥ್ ಮಾಂಡ್ರೆ ಶ್ರೀ ಹ.ಭ.ಪ ಚಂದ್ರಕಾಂತ ವಾದೋನಿ ವಿಠ್ಠಲ ವಂಟಕರ್, ರಾಘವೇಂದ್ರ ನವಲೆ, ಮಂಜುನಾಥ್ ಸರ್ವದೆ ಮತ್ತು ಇತರರು ನಡೆಸಿಕೊಟ್ಟರು ಎಂದು ವಿಠ್ಠಲ ಮಂದಿರದ ನಿರ್ಮಾಣ ಮುಖ್ಯಸ್ಥ ತಿಪ್ಪಮ್ಮ ತಿಳಿಸಿದ್ದಾರೆ.

# ಮೈಲಾರ ಪಾದಯಾತ್ರೆ, ಅನ್ನ ಸಂತರ್ಪಣೆ ರದ್ದು

ದಾವಣಗೆರೆ, ಜ.23- ಕೋವಿಡ್ ಹಿನ್ನೆಲೆಯಲ್ಲಿ ನಗರದ ಶ್ರೀ ಕ್ಷೇತ್ರ ಮೈಲಾರ ಲಿಂಗೇಶ್ವರ ಸ್ವಾಮಿ ದೇವಸ್ಥಾನದ ವತಿಯಿಂದ ಈ ಬಾರಿ ಹಮ್ಮಿಕೊಂಡಿದ್ದ ಪಾದಯಾತ್ರೆ ಮತ್ತು ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ರದ್ದು ಮಾಡಲಾಗಿದೆ. ಭಕ್ತರು ಸ್ವ ಇಚ್ಛೆಯಿಂದ ಪಾದಯಾತ್ರೆ ಹೋಗುತ್ತಿರುವುದರಿಂದ ದೇವಸ್ಥಾನ ಟ್ರಸ್ಟ್ ವತಿಯಿಂದ ಯಾವುದೇ ದೇಣಿಗೆಯನ್ನು ಸ್ವೀಕರಿಸುತ್ತಿಲ್ಲ. ದೇವಸ್ಥಾನದ ಟ್ರಸ್ಟ್‌ನ ಯಾವುದೇ ಸಿಬ್ಬಂದಿಯು ರಸೀದಿಯಿಲ್ಲದೇ ಕಾಣಿಕೆಯನ್ನು ಸ್ವೀಕರಿಸುತ್ತಿಲ್ಲ ಎಂದು ಟ್ರಸ್ಟ್ ತಿಳಿಸಿದೆ.

# ಇಂದು 'ಅಮರ್ ಜವಾನ್ ಸ್ಮಾರಕ' 2ನೇ ಹಂತದ ಕಾಮಗಾರಿ ಉದ್ಘಾಟನೆ

ದಾವಣಗೆರೆ, ಜ.23- ನಗರದ ಎಸ್. ನಿಜಲಿಂಗಪ್ಪ ಬಡಾವಣೆಯ ಬಯಲು ಜಾಗದಲ್ಲಿ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿ, ಅಭಿವೃದ್ಧಿ ಪಡಿಸುತ್ತಿರುವ 'ಅಮರ್ ಜವಾನ್ ಸ್ಮಾರಕ' ನಿರ್ಮಾಣದ 2 ನೇ ಹಂತದ 18 ಲಕ್ಷ ರೂ. ವೆಚ್ಚದ ಕಾಮಗಾರಿಯ ಉದ್ಘಾಟನಾ ಸಮಾರಂಭವು ನಾಳೆ ದಿನಾಂಕ 24 ರಂದು ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಜಿಲ್ಲಾ ಮಾಜಿ ಸೈನಿಕರ ವಿವಿಧೋದ್ದೇಶ ಸಂಘದ ಅಧ್ಯಕ್ಷ ಸತ್ಯಪ್ರಕಾಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಉದ್ಘಾಟಿಸಲಿದ್ದಾರೆ. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿ.ಎಂ. ಸಿದ್ದೇಶ್ವರ, ದೇವರಮನಿ ಶಿವಕುಮಾರ್, ಪ್ರೊ. ಎನ್. ಲಿಂಗಣ್ಣ, ಶಾಮನೂರು ಶಿವಶಂಕರಪ್ಪ, ಕೆ.ಎಸ್. ನವೀನ್ ಕುಮಾರ್, ಎಸ್. ರಾಮಪ್ಪ, ಎಸ್.ಟಿ.ವೀರೇಶ್, ಮಹಾಂತೇಶ್ ಬೀಳಗಿ, ಸಿ.ಬಿ. ರಿಷ್ಯಂತ್ ಮತ್ತಿತರರು ಆಗಮಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಮಾಜಿ ಸೈನಿಕರ ವಿವಿಧೋದ್ದೇಶ ಸಂಘದ ಉಪಾಧ್ಯಕ್ಷ ಮನೋಹರ ಮಹೇಂದ್ರಕರ್ ಉಪಸ್ಥಿತರಿದ್ದರು.

# 27 ರಂದು ನಗರದಲ್ಲಿ ಟೆನ್ನಿಸ್ ಬಾಲ್ ಮಿನಿ ಕ್ರಿಕೆಟ್ ಟೂರ್ನಿಮೆಂಟ್

ದಾವಣಗೆರೆ,ಜ.23- ಶ್ರೀ ದುರ್ಗಾಂಬಿಕ ಫ್ರೆಂಡ್ಸ್ ಗ್ರೂಪ್ ಇವರ ಆಶ್ರಯದಲ್ಲಿ ಇದೇ ದಿನಾಂಕ 27 ಮತ್ತು 28 ರಂದು 2 ದಿನಗಳ ಕಾಲ ಪ್ರಥಮ ಬಾರಿಗೆ ಟೆನ್ನಿಸ್ ಬಾಲ್ ಮಿನಿ ಕ್ರಿಕೆಟ್ ಟೂರ್ನಿಮೆಂಟನ್ನು ದೇವರಾಜ ಅರಸು ಬಡಾವಣೆಯ ಈಜು ಕೊಳದ ಬಳಿಯ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

24 ತಂಡಗಳಿಗೆ ಅವಕಾಶವಿದ್ದು, ಪ್ರವೇಶ ಶುಲ್ಕ ಇರುತ್ತದೆ. ಪಂದ್ಯದಲ್ಲಿ ಗೆದ್ದ ತಂಡಕ್ಕೆ ಪ್ರಥಮ ಬಹುಮಾನ 20 ಸಾವಿರ, ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ 10 ಸಾವಿರ, ಆಕರ್ಷಕ ಟ್ರೋಫಿ, ತೃತೀಯ ಬಹುಮಾನ ಆಕರ್ಷಕ ಟ್ರೋಫಿ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಪ್ರಶಾಂತ್ (9113044780), ಜೆ.ವಿ. ಸಂತೋಷ್ (6363204316), ಚೇತನ್.ಆರ್ (8105149669) ಡಿ. ವಿ. ವಿನಾಯಕ (9148675186) ಅವರುಗಳನ್ನು ಸಂಪರ್ಕಿಸಬಹುದು.

# ಏಕಮುಖ ರಸ್ತೆಯಲ್ಲಿ ಸಂಚರಿಸಿದ ಸಾರಿಗೆ ಬಸ್ ಚಾಲಕನಿಗೆ ಸಾರ್ವಜನಿಕರ ತರಾಟೆ

ದಾವಣಗೆರೆ, ಜ.23- ಏಕ ಮುಖ ರಸ್ತೆಯಲ್ಲಿ ಬಂದ ಸಾರಿಗೆ ಬಸ್ ಚಾಲಕನಿಗೆ ಸಾರ್ವಜನಿಕರು ತರಾಟೆ ತೆಗೆದುಕೊಂಡ ಘಟನೆ ನಗರದ ಎವಿಕೆ ರಸ್ತೆಯಲ್ಲಿ ನಡೆದಿದೆ.

ಏಕ ಮುಖ ರಸ್ತೆ ಇದ್ದರೂ ರಾಂಗ್ ರೂಟ್ ನಲ್ಲಿ ಬಂದ ದಾವಣಗೆರೆ-ಶಿವಮೊಗ್ಗ ಮಾರ್ಗ ಮಧ್ಯ ಸಂಚರಿಸುವ ದಾವಣಗೆರೆ ವಿಭಾಗದ ಕೆಎಸ್ ಆರ್‌ಟಿಸಿ ಬಸ್ ಚಾಲಕನಿಗೆ ಸಾರ್ವಜನಿಕರು ತರಾಟೆಗೆ ತೆಗೆದುಕೊಂಡಿದ್ದಾರೆ.

ಎವಿಕೆ ರಸ್ತೆ ಪಕ್ಕದಲ್ಲಿಯೇ ಕೇಂದ್ರ ಬಸ್ ನಿಲ್ದಾಣವಿದ್ದು, ನಿಲ್ದಾಣದಿಂದ ಬಸ್ ಹೊರ ಹೋಗಲು ಪಾಲಿಕೆ ಬಳಿ ಮಾರ್ಗವಿದೆ. ಆದರೆ ಈ ಬಸ್ ಎವಿಕೆ ರಸ್ತೆಯಲ್ಲಿ ಏಕ ಮುಖ ರಸ್ತೆ ಇದ್ದರೂ ಅದೇ ರಸ್ತೆಯಲ್ಲಿ ಬಂದಿದ್ದಾನೆ. ಇದರಿಂದ ಎವಿಕೆ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು.


ವಾಸವಿ ಯುವಜನ ಸಂಘ (ರಿ)
ಎಸ್.ಕೆ.ಪಿ. ರಸ್ತೆ, ದಾವಣಗೆರೆ

ಜನ್ಮದಿನದ ಶುಭಾಶಯಗಳು



ಶ್ರೀ ರಘುಪ್ರಸಾದ್
ನಿರ್ದೇಶಕರು



ಮಾತೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರು ಅವರಿಗೆ ಆಯುರಾರೋಗ್ಯ-ಅಷ್ಟೈಶ್ವರ್ಯ-ಸುಖ-ಶಾಂತಿ - ನೆಮ್ಮದಿ ನೀಡಲಿ ಹಾಗೂ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ನೀಡಲೆಂದು ಪ್ರಾರ್ಥಿಸುತ್ತಾ, ಶುಭ ಹಾರೈಸುತ್ತೇವೆ.

ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರು
ವಾಸವಿ ಯುವಜನ ಸಂಘ (ರಿ), ಎಸ್.ಕೆ.ಪಿ. ರಸ್ತೆ, ದಾವಣಗೆರೆ.









ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ

1.50 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ

ದಿನಾಂಕ 24-01-2022 ರ ಸೋಮವಾರ ಮಧ್ಯಾಹ್ನ 12 ಕ್ಕೆ

| ಕಾಮಗಾರಿಗಳ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|
| 1) ದಾವಣಗೆರೆ ನಗರದ ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಬಯಲು ಜಾಗದಲ್ಲಿ ಅಮರ್ ಜವಾನ್ ಸ್ಮಾರಕ ಪಾರ್ಕಿನ 2ನೇ ಹಂತದ ಅಭಿವೃದ್ಧಿ ಪಡಿಸುವುದು. ಕೈಗೊಂಡ ಕಾಮಗಾರಿಗಳ ವಿವರ: 1) ಅಮರ್ ಜವಾನ್ ಸ್ಮಾರಕ ನಿರ್ಮಾಣ 2) ಬಯಲು ವೇದಿಕೆ ನಿರ್ಮಾಣ 3) ಸುತ್ತಲೂ ವಾಕಿಂಗ್ ಪಾಥ್ ನಿರ್ಮಾಣ 4) ಗಿಡಗಳನ್ನು ನೆಟ್ಟು ಹುಲ್ಲುಗಾವಲು ನಿರ್ಮಾಣ | 18.00 |
| 2) ದಾವಣಗೆರೆ ನಗರದ ವಾರ್ಡ್ ನಂ.40 ರಲ್ಲಿ ಬರುವ ಸ್ವಾಮಿ ವಿವೇಕಾನಂದ ಬಡಾವಣೆ 5ನೇ ಕ್ರಾಸ್ ರಾಜಕಾಲುವೆ ಪಕ್ಕದಲ್ಲಿರುವ ಉದ್ಯಾನವನ್ನು ಅಭಿವೃದ್ಧಿ ಪಡಿಸುವುದು 1) ನೆಲವನ್ನು ಮಟ್ಟ ಮಾಡಿ ಕಾಂಪೌಂಡ್ ವಾಲ್ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸುವುದು 2) ಸುತ್ತಲೂ ವಾಕಿಂಗ್ ಪಾಥ್ ನಿರ್ಮಾಣ ಮತ್ತು ಆರ್.ಸಿ.ಸಿ. ಬೆಂಚ್ ಅಳವಡಿಸುವುದು 3) ಯೋಗ ಪ್ಲಾಟ್ ಫಾರಂ ನಿರ್ಮಾಣ 4) ಎಲ್.ಇ.ಡಿ. ವಿದ್ಯುತ್ ದೀಪಗಳನ್ನು ಅಳವಡಿಸುವುದು | 92.00 |
| 3) ದಾವಣಗೆರೆ ನಗರದ ವಾರ್ಡ್ ನಂ.40ರಲ್ಲಿ ಬರುವ ವಿನಾಯಕ ಬಡಾವಣೆಯ ಸೌಜನ್ಯ ಉದ್ಯಾನವನದ ಅಭಿವೃದ್ಧಿ 1) ಯೋಗ ಪ್ಲಾಟ್ ಫಾರ್ಮ್ ನಿರ್ಮಾಣ 2) ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ 3) ಉದ್ಯಾನವನದ ದಕ್ಷಿಣದ ಭಾಗದಲ್ಲಿ ಸುತ್ತಲೂ ಎಲ್.ಇ.ಡಿ. ವಿದ್ಯುತ್ ದೀಪಗಳನ್ನು ಅಳವಡಿಸುವುದು | 36.00 |

ದೇವರಮನೆ ಶಿವಕುಮಾರ್
ಅಧ್ಯಕ್ಷರು, ದಾವಣಗೆರೆ-ಹರಿಹರ
ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಸದಸ್ಯರು:



ಮಾರುತಿರಾವ್ ಘಾಟ್ಗೆ | ಲಕ್ಷ್ಮಣ | ಬಾತಿ ಚಂದ್ರಶೇಖರ್ | ಗೌರಮ್ಮ ವಿ. ಪಾಟೀಲ್

ಪ್ರಕಟಣೆ:
ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ ಮತ್ತು ಸ್ವಾಮಿ ವಿವೇಕಾನಂದ ಬಡಾವಣೆ ನಾಗರಿಕರು, ದಾವಣಗೆರೆ.

# ಸಿದ್ಧಗಂಗಾ ಶಾಲೆಯಲ್ಲಿ 'ದಾಸೋಹ ದಿನ'



ದಾವಣಗೆರೆ, ಜ.23- ತ್ರಿವಿಧ ದಾಸೋಹ ಮೂರ್ತಿ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 3ನೇ ವರ್ಷದ ಸ್ಮರಣೋತ್ಸವವನ್ನು ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ದಾಸೋಹ ದಿನವಾಗಿ ಆಚರಿಸಲಾಯಿತು.

ಪುಜ್ಯರ ಬಗ್ಗೆ ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿ'ಸೌಜರವರು ಮಾತನಾಡಿ, ಸಿದ್ಧಗಂಗಾ ಮಠ ಜಗತ್ಪ್ರಸಿದ್ಧವಾಗಲು ಪೂಜ್ಯ ಸ್ವಾಮೀಜಿಯವರು ನಿರಂತರ ನಡೆಸಿಕೊಂಡು ಬಂದ ಅನ್ನ, ವಸತಿ, ಅಕ್ಷರ ದಾಸೋಹ ಕಾರಣವೆಂದರು. ಭೀಕರ ಬರಗಾಲದಲ್ಲೂ ಶ್ರೀಮಠದಲ್ಲಿ ತ್ರಿವಿಧ ದಾಸೋಹವನ್ನು ತಮ್ಮ ಜೋಳಿಗೆಯ ನೆರವಿನಿಂದ ನಡೆಸಿಕೊಂಡು ಬಂದ ಕೀರ್ತಿ ಅವರದು. ನಡೆದಾಡುವ ದೇವರ ಕಾಲದಲ್ಲಿದ್ದು ಅವರ ದಿವ್ಯದರ್ಶನ ಪಡೆದ ನಾವೆಲ್ಲರೂ ಧನ್ಯರು ಎಂದರು.

ಸಿದ್ಧಗಂಗಾ ಶ್ರೀಗಳವರ ಆಶೀರ್ವಾದದಿಂದ ದಿ|| ಎಂ. ಎಸ್. ಶಿವಣ್ಣನವರು 1970ರಲ್ಲಿ ಸ್ಥಾಪಿಸಿದ ಸಿದ್ದಗಂಗಾ ಸಂಸ್ಥೆಗೆ ಹಲವಾರು ಬಾರಿ ಭೇಟಿ ನೀಡಿ, ಇಲ್ಲಿಯ ಶಿಕ್ಷಣ ಕ್ರಮ ಮತ್ತು ಶಿಸ್ತನ್ನು ಬಹುವಾಗಿ ಮೆಚ್ಚಿಕೊಂಡಿದ್ದನ್ನು ಡಿಸೋಜಾ ಅವರು ಸ್ಮರಿಸಿದರು.

ವಿಧ್ಯುಕ್ತ ಪೂಜೆಯ ನಂತರ ಶಾಲಾ-ಕಾಲೇಜಿನ ಮಕ್ಕಳಿಗೆ ಹಣ್ಣುಗಳನ್ನು ವಿತರಿಸಲಾಯಿತು. ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಜಿ.ಸಿ. ನಿರಂಜನ್, ಸಂಸ್ಥೆಯ ಅಧ್ಯಕ್ಷ ಪ್ರಶಾಂತ್, ಕಾರ್ಯದರ್ಶಿ ಹೇಮಂತ್, ನಿರ್ದೇಶಕ ಡಾ|| ಜಯಂತ್ ಮತ್ತು ಇತರರು ಉಪಸ್ಥಿತರಿದ್ದರು. ಸಂಗೀತ ಶಿಕ್ಷಕಿ ಶ್ರೀಮತಿ ರುದ್ರಾಕ್ಷಿ ಬಾಯಿ ಮತ್ತು ಶಾಲೆಯ ಮಕ್ಕಳು ಭಕ್ತಿಗೀತೆಗಳನ್ನು ಹಾಡಿದರು

## ರಾಣೇಬೆನ್ನೂರು: ಪಂಚಮಸಾಲಿ ಗ್ರಾಮೀಣ ಸಂಘಕ್ಕೆ ಆಯ್ಕೆ

ರಾಣೇಬೆನ್ನೂರು, ಜ.23- ವೀರಶೈವ ಲಿಂಗಾಯತ ಪಂಚಮ ಸಾಲಿ ಸಂಘದ ಗ್ರಾಮೀಣ ಘಟಕದ ಗೌರವಾಧ್ಯಕ್ಷರಾಗಿ ಹನುಮನಗೌಡ ಚನ್ನಗೌಡ್ರ, ಅಧ್ಯಕ್ಷರಾಗಿ ಸಿದ್ದಪ್ಪ





ಚಿಕ್ಕಬಿದರಿ, ಉಪಾಧ್ಯಕ್ಷರಾಗಿ ಬಸವರಾಜ ಹುಲ್ಲತ್ತಿ, ಪ್ರಧಾನ ಕಾರ್ಯದರ್ಶಿಯಾಗಿ ದಯಾನಂದಗೌಡ ಪಾಟೀಲ, ಖಜಾಂಚಿಯಾಗಿ ಕಾಡಪ್ಪ ಬೆಲ್ಲದ, ಸಂಘಟನಾ ಕಾರ್ಯದರ್ಶಿಯಾಗಿ ಮಹೇಶ್ವರಗೌಡ ಪಾಟೀಲ, ಶಿವಪ್ಪ ಕುರುವತ್ತಿ, ಶಂಕರಪ್ಪ ದಾನಪ್ಪನವರ, ಬಸವರಾಜ ಬೆನಕನಕೊಂಡ ಆಯ್ಕೆಗೊಂಡರು.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ವಸಂತ ಹುಲ್ಲತ್ತಿ, ಶಂಕರಗೌಡ ರಾಮಲಿಂಗಣ್ಣನವರ, ಬಸವರಾಜ ಮೇಗಳಗೇರಿ, ಮಲ್ಲಜ್ಜ ಹೆಗ್ಗಪ್ಪನವರ, ವಿರುಪಾಕ್ಷಪ್ಪ ಮುಂಡಾಸದ, ಗೀತಾ ಕಾಕೋಳ, ಶಿವರಾಜ ಸೀಮಿಕೇರಿ, ವಿಜಯಾನಂದ ಬೆಲ್ಲದ, ಬಸವರಾಜ ಧೂಳೆಹೊಳೆ, ಕೃಷ್ಣ ಅಣ್ಣಿಗೇರಿ, ಸುರೇಶ ಮಣೇಗಾರ, ಶಿವಯೋಗಿ ಗೌಳಿ ಆಯ್ಕೆ ಯಾಗಿದ್ದಾರೆ ಎಂದು ಜಿಲ್ಲಾಧ್ಯಕ್ಷ ನಾಗೇಂದ್ರ ಕಟಕೋಳ ತಿಳಿಸಿದ್ದಾರೆ.













JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte